ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 33 RNI Number : KNKAN/25/A2770 06-02-2026 Friday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :33 ರಾಯಚೂರು 06-02-2026 ಶುಕ್ರವಾರ ಪುಟ 04 ಬೆಲೆ ರೂ.2/- ಮೊ:8660146563

ಭಾರತದ ವ್ಯಾಪಾರ ಒಪ್ಪಂದಗಳನ್ನು ಜಗತ್ತು ಮೆಚ್ಚಿದೆ: ಪ್ರಧಾನಿ ಮೋದಿ

ನವದೆಹಲಿ: ಯುರೋಪಿಯನ್ ಯೂನಿಯನ್ (ಇಯು) ಮತ್ತು ಅಮೆರಿಕದ ಜತೆ ಭಾರತದ ವ್ಯಾಪಾರ ಒಪ್ಪಂದಗಳ ನಂತರ ಜಗತ್ತು ಸ್ಥಿರತೆಯ ಬಗ್ಗೆ ಹೆಚ್ಚು ವಿಶ್ವಾಸ ಹೊಂದಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅಭಿಪ್ರಾಯಪಟ್ಟರು.

ರಾಷ್ಟ್ರಪತಿಗಳ ಭಾಷಣದ ವಂದನಾ ನಿರ್ಣಯ ಮೇಲಿನ ಚರ್ಚೆಗೆ ಇಂದು ಸಂಜೆ ರಾಜ್ಯಸಭೆಯಲ್ಲಿ ಸುದೀರ್ಘವಾಗಿ ಉತ್ತರಿಸಿದ ಮೋದಿ, ಸರ್ಕಾರ ಸಾಧನೆಗಳನ್ನು ಬಿಡಿಬಿಡಿಯಾಗಿ ವಿವರಿಸುತ್ತಾ, ಕಾಂಗ್ರೆಸ್ ವಿರುದ್ಧ ಟೀಕಾಪ್ರಹಾರ ಮಾಡಿದರು.

ಭಾರತದ ಒಪ್ಪಂದಗಳನ್ನು ಜಗ ಮೆಚ್ಚಿದೆ: ಭಾರತ ಹಲವಾರು ದೇಶಗಳೊಂದಿಗೆ ಭವಿಷ್ಯಕ್ಕೆ ಸಿದ್ಧವಾದ( ) ವ್ಯಾಪಾರ ಒಪ್ಪಂದಗಳಿಗೆ ಸಹಿ ಹಾಕುತ್ತಿದೆ. ಕಳೆದ ಕೆಲವು ದಿನಗಳಲ್ಲಿ ಯುರೋಪಿಯನ್ ಒಕ್ಕೂಟ(ಇಯು)ದ 27 ರಾಷ್ಟ್ರಗಳ ಗುಂಪಿನೊಂದಿಗೆ 'ಮದರ್ ಆಫ್ ಆಲ್ ಡೀಲ್ಸ್' ಎಂದೇ ಬಣ್ಣಿಸಲಾದ ಮಹತ್ವದ ವ್ಯಾಪಾರ ಒಪ್ಪಂದವೂ ಸೇರಿ ಇತರೆ 9 ದೊಡ್ಡ ದೇಶಗಳೊಂದಿಗೆ ನಾವು ವ್ಯಾಪಾರ ಒಪ್ಪಂದಗಳಿಗೆ ಸಹಿ ಹಾಕಿದ್ದೇವೆ. ಈ ಒಪ್ಪಂದಗಳನ್ನು ಜಗತ್ತು ಮೆಚ್ಚಿಕೊಂಡಿದೆ ಎಂದು ವಿವರಿಸಿದರು. ಇದೇ ವೇಳೆ, ಭಾರತ ಈಗ ಜಾಗತಿಕ ದಕ್ಷಿಣ( )ದ ಬಲವಾದ ಧ್ವನಿಯಾಗಿದೆ ಎಂದೂ ಹೆಮ್ಮೆ ವ್ಯಕ್ತಪಡಿಸಿದರು.

ಕಾಂಗ್ರೆಸ್ ಸರ್ಕಾರದ ತಪ್ಪು ಸರಿಪಡಿಸುವಲ್ಲಿ ನಮ್ಮ ಹೆಚ್ಚು ಸಮಯ ವ್ಯಯ: ಇದೇ ವೇಳೆ ವಿರೋಧ ಪಕ್ಷದ ವಿರುದ್ಧ ವಾಗ್ದಾಳಿ ನಡೆಸುತ್ತಾ, ಈ ಹಿಂದೆ ತಾವು ರಾಷ್ಟ್ರಕ್ಕೆ ಮಾಡಿರುವ ಕೆಲಸಗಳಿಗೆ ಒಂದಿನ ಉತ್ತರಿಸಬೇಕಾಗುತ್ತದೆ ಎಂದು ಚಾಟಿ ಬೀಸಿದರು. ಕಾಂಗ್ರೆಸ್ ನೇತೃತ್ವದ ಸರ್ಕಾರಗಳ ತಪ್ಪುಗಳನ್ನು ಸರಿಪಡಿಸುವಲ್ಲಿ ನಮ್ಮ ಹೆಚ್ಚಿನ ಶಕ್ತಿ ವ್ಯಯವಾಗಿದೆ ಎಂದು ತಿಳಿಸಿದರು. ಸಂಸತ್ತಿನಲ್ಲಿ ನಡೆದ ಕೋಲಾಹಲವನ್ನು ಉಲ್ಲೇಖಿಸಿ, ವಿರೋಧ ಪಕ್ಷ ಸತತವಾಗಿ ಚುನಾವಣಾ ಸೋಲುಗಳನ್ನು ಅನುಭವಿಸುತ್ತಿದ್ದು, ಅವರಿಗೆ ಅವುಗಳನ್ನು ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ



ಎಂದರು.

ಲೋಕಸಭೆಯಲ್ಲಿ ಕಲಾಪಗಳಿಗಾದ ಅಡಚಣೆಗೆ ವಿಷಾದ ವ್ಯಕ್ತಪಡಿಸಿ, ಇದು ಭಾರತದ ಬಡ ಬುಡಕಟ್ಟು ಮಹಿಳೆ ರಾಷ್ಟ್ರಪತಿಗೆ ಮಾಡಿದ ಅವಮಾನ. ಮಾತ್ರವಲ್ಲದೇ, ಅವರು ಹೊಂದಿದ್ದ ಉನ್ನತ ಸಾಂವಿಧಾನಿಕ ಸ್ಥಾನಮಾನ ಮತ್ತು ಭಾರತದ ಸಂವಿಧಾನಕ್ಕೂ ಮಾಡಿದ ಅವಮಾನ ಎಂದು ಟೀಕಿಸಿದರು.

ಕಾಂಗ್ರೆಸ್ ನನ್ನ ಸಮಾಧಿ ಅಗೆಯಲು ಯತ್ನಿಸುತ್ತಿದೆ: ವಿರೋಧ ಪಕ್ಷವು ನನ್ನ ಸಮಾಧಿಯನ್ನು ಅಗೆಯುವಲ್ಲಿ ಎಂದಿಗೂ ಯಶಸ್ವಿಯಾಗುವುದಿಲ್ಲ. ನನಗೆ ಕೋಟ್ಯಂತರ ತಾಯಂದಿರು, ಸಹೋದರಿಯರು ಮತ್ತು ದೇಶದ ಬಡವರ ಆಶೀರ್ವಾದವಿದೆ. ಅವರಿಗಾಗಿ ನಿಸ್ವಾರ್ಥವಾಗಿ ಕೆಲಸ ಮಾಡುತ್ತಿದ್ದೇನೆ ಎಂದರು.

ರಾಹುಲ್ ಹೇಳಿಕೆ ಇಡೀ ಸಿಖ್ ಸಮುದಾಯಕ್ಕೆ ಮಾಡಿದ ಅವಮಾನ: ಕೇಂದ್ರ ಸಚಿವ ರವನೀತ್ ಸಿಂಗ್ ಬಿಟ್ಟು ಅವರ ಬಗ್ಗೆ ರಾಹುಲ್ ಗಾಂಧಿ ಅವರ 'ದೇಶದ್ರೋಹಿ' ಹೇಳಿಕೆಯನ್ನು ಖಂಡಿಸಿದ ಮೋದಿ, ಇದು ಇಡೀ ಸಿಖ್ ಸಮುದಾಯಕ್ಕೆ ಮಾಡಿದ ಅವಮಾನ ಎಂದು ಕಿಡಿ ಕಾರಿದರು.

ಟಿಎಂಸಿಯಿಂದ ಒಳ ನುಸುಳುಕೋರರ ರಕ್ಷಣೆ: ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿ ಪಕ್ಷ ಪಶ್ಚಿಮ ಬಂಗಾಳದಲ್ಲಿ ಒಳನುಸುಳುಕೋರರನ್ನು ರಕ್ಷಿಸುತ್ತಿದೆ. ಅವರು ಯುವಕರ ಉದ್ಯೋಗಗಳು, ಹಕ್ಕುಗಳನ್ನು ಮತ್ತು ಬುಡಕಟ್ಟು ಜನಾಂಗದ ಭೂಮಿಯನ್ನು ಕಸಿದುಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

'ಸುಧಾರಣಾ ಎಕ್ಸ್ ಪ್ರೆಸ್'ನಲ್ಲಿದೆ ಭಾರತ: ಕಳೆದ 11 ವರ್ಷಗಳಲ್ಲಿ ತಮ್ಮ ಸರ್ಕಾರದ ಸಾಧನೆಗಳನ್ನು ಹೇಳುತ್ತಾ, ಭಾರತ ಈಗ 'ಸುಧಾರಣಾ ಎಕ್ಸ್ ಪ್ರೆಸ್'ನಲ್ಲಿದೆ. 2047ರ ವೇಳೆಗೆ ಅಭಿವೃದ್ಧಿ ಹೊಂದಿದ ರಾಷ್ಟ್ರದ ಗುರಿ ಸಾಧಿಸುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ವಿಪಕ್ಷಗಳಿಂದ ಸಭಾತ್ಯಾಗ: ಇದಕ್ಕೂ ಮುನ್ನ, ವಿರೋಧ ಪಕ್ಷದ ಘೋಷಣೆಗಳ ನಡುವೆಯೇ ಪ್ರಧಾನಿ ಮೋದಿ ತಮ್ಮ ಭಾಷಣ ಶುರು ಮಾಡಿದರು. ನಂತ ವಿಪಕ್ಷಗಳ ಸದಸ್ಯರು ಸಭಾತ್ಯಾಗ ಮಾಡಿದರು.

ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ಮೆರವಣಿಗೆಯಲ್ಲಿ ಕಲೆ, ಸಂಸ್ಕೃತಿ, ಪರಂಪರೆಯ ಮೆಲುಕು

ರಾಯಚೂರು,ಫೆ.05 -

ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ನಿಮಿತ್ತ ಗುರುವಾರ ರಾಯಚೂರಿನ ಕರ್ನಾಟಕ ಸಂಘದ ಆವರಣದಿಂದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದವರೆಗೆ ನಡೆದ ವಿಜ್ರಂಭಣೆಯ ಮೆರವಣಿಗೆಯು ಈ ಭಾಗದ ಕಲೆ, ಸಂಸ್ಕೃತಿ, ಪರಂಪರೆಯ ಮೆಲುಕು ಹಾಕುವ ರೀತಿಯಲ್ಲಿ ವಿಜ್ರಂಭಣೆಯಿಂದ ನಡೆಯಿತು.

ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ ಆರ್.ಪಾಟೀಲ ಅವರು ನಾಡ ದೇವತೆ ತಾಯಿ ಭುವನೇಶ್ವರಿ ದೇವಿಯ ಮೂರ್ತಿಗೆ ಪುಷ್ಪಾರ್ಪಿಸಿ, ಬಳಿಕ ಡೊಳ್ಳು ಬಾರಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.



ಈ ಸಂದರ್ಭದಲ್ಲಿ ರಾಯಚೂರು ಗ್ರಾಮೀಣ ಕ್ಷೇತ್ರದ ಶಾಸಕರಾದ ಬಸವನಗೌಡ ದದ್ದಲ್, ರಾಯಚೂರು ನಗರ ಕ್ಷೇತ್ರದ ಶಾಸಕರಾದ ಶಿವರಾಜ ಪಾಟೀಲ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಪಾಮಯ್ಯ ಮುರಾರಿ, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹೊಪಾತ್ರ ಸೇರಿದಂತೆ ಇತರೆ ಜನಪ್ರತಿನಿಧಿಗಳು, ವಿವಿಧ ಇಲಾಖೆಗಳ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಕರ್ನಾಟಕ ಸಂಘದ ಆವರಣದಿಂದ ಆರಂಭಗೊಂಡ ಮೆರವಣಿಗೆಯು ಬಂಗಾರ ಬಜಾರ್, ಡಾ.ಬಿ.ಆರ್.ಅಂಬೇಡ್ಕರ್ ವೃತ್ತ, ಬಸವೇಶ್ವರ ವೃತ್ತದ ಮಾರ್ಗವಾಗಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದವರೆಗೆ ಅದ್ದೂರಿಯಾಗಿ ನಡೆಯಿತು.

ಮೆರವಣಿಗೆ ಸಾಗಿ ಬಂದ ರಸ್ತೆಯ ಇಕ್ಕೆಲಗಳಲ್ಲಿ ಜನರು ಕುತೂಹಲ ದಿಂದ ಮೆರವಣಿಗೆಯಲ್ಲಿ ಆಗಮಿಸುತ್ತಿದ್ದ ಕಲಾತಂಡಗಳ ಪ್ರದರ್ಶನವನ್ನು ವೀಕ್ಷಿಸಿ ಖುಷಿಪಟ್ಟರು. ರಾಯಚೂರು ಜಿಲ್ಲಾ ಉತ್ಸವದಲ್ಲಿ ವೈವಿಧ್ಯಮಯ ಕಲಾತಂಡಗಳ ಮೆರವಣಿಗೆಯು ಉತ್ಸವದ ಮೆರಗನ್ನು ಇನ್ನಷ್ಟು ಹೆಚ್ಚಿಸಿತು. ಮೆರವಣಿಗೆಯಲ್ಲಿ ಬಸವರಾಜ ಸಿಂಧನೂರು ಅವರಿಂದ ವೀರಗಾಸೆ, ಅಂಬರೇಶ ಹಸಮಕಲ್ ಅವರಿಂದ ಹಗಲುವೇಷ, ದೇವರಾಜು ಅವರಿಂದ ಚಿಲಿಪಿಲಿ ಗೊಂಬೆ,

3ನೇ ಪುಟಕ್ಕೆ

ರಾಯಚೂರು ಜಿಲ್ಲಾ ಉತ್ಸವ ಬಾಯಲ್ಲಿ ನೀರೂರಿಸುವ ಆಹಾರ ಮೇಳ : ವಿವಿಧ ಬಗೆಯ ತಿನಿಸುಗಳಿಗೆ ಮುಗಿಬಿದ್ದ ಜನ



ರಾಯಚೂರು ಫೆ. 05 :ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ಅಂಗವಾಗಿ ಇಲ್ಲಿನ ಕೃಷಿ ವಿಶ್ವವಿಶ್ವವಿದ್ಯಾಲಯ ಆವರಣದಲ್ಲಿ ವಿಶಾಲವಾದ ಪ್ರದೇಶದಲ್ಲಿ ಸ್ಥಾಪಿಸಲಾಗಿರುವ ಆಹಾರ ಮೇಳದ ಮಳಿಗೆಯಲ್ಲಿ ಉತ್ಸವದ ಮೊದಲ ದಿನವೇ ಬೆಳಿಗ್ಗೆಯಿಂದಲೇ ಇಲ್ಲಿನ ತಿಂಡಿ ತಿನಿಸುಗಳಿಗೆ ಜನ ಮುಗಿಬಿದ್ದ ಸವಿಯುವುದು ಕಂಡುಬಂದಿತು.

ಆಹಾರ ಮೇಳವನ್ನು ಉದ್ಘಾಟಿಸಿದ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲರು ಮಳಿಗೆಯಲ್ಲಿ ತೆರೆಯಲಾಗಿದ್ದ ವಿವಿಧ ಬಗೆಯ ತಿಂಡಿ ತಿನಿಸುಗಳ ಮಳಿಗೆಗಳಿಗೆ ಖುದ್ದು ಭೇಟಿ ನೀಡಿ, ಪರಿಶೀಲಿಸಿದರು. ಮಹಿಳಾ ಸ್ವ ಸಹಾಯ ಸಂಘದ ಮಹಿಳೆಯೊಬ್ಬರು ಮಳಿಗೆಯಲ್ಲಿ ಆಗಷ್ಟೇ ತಯಾರಿಸಿದ್ದ ಜಿಲೇಬಿಯನ್ನು ಪಡೆದು, ರುಚಿ ನೋಡಿ, ಖುಷಿ ಪಟ್ಟರು. ಇವರೊಂದಿಗೆ ಮಳಿಗೆಗೆ ಆಗಮಿಸಿದ್ದ ವಿವಿಧ ಗಣ್ಯರು ಕೂಡ ಜಿಲೇಬಿಯ ಸವಿಯನ್ನು ಸವಿದರು. ಬಳಿಕ ಆಹಾರ ಮಳಿಗೆಯಲ್ಲಿಯೇ ವಿಶೇಷವಾಗಿ ತಯಾರಿಸಲಾಗಿದ್ದ ಕೇಕ್ ಅನ್ನು ಕೂಡ ಕತ್ತರಿಸಿ, ಆಹಾರ ಮೇಳದ ಸಂಭ್ರಮವನ್ನು ಇಮ್ಮಡಿಗೊಳಿಸಿದರು.

ಆಹಾರ ಮೇಳಕ್ಕೆ ಸಚಿವರೊಂದಿಗೆ ವಾಲ್ಮೀಕಿ ಅಭಿವೃದ್ಧಿ ನಿಗಮ ಅಧ್ಯಕ್ಷ ಬಸನಗೌಡ ದದ್ದಲ್, ರಾಯಚೂರು ನಗರ ಶಾಸಕ ಡಾ. ಶಿವರಾಜ ಪಾಟೀಲ್, ಜಿಲ್ಲಾ ಗ್ಯಾರಂಟಿ ಯೋಜನೆಗಳ

3ನೇ ಪುಟಕ್ಕೆ

ಫೆ.07ರಂದು ಮಹಿಳಾ ಸಮಾಜ ಆವರಣದಲ್ಲಿ ಸಂವಾದ ಗೋಷ್ಠಿ

ರಾಯಚೂರು ಫೆಬ್ರವರಿ 05 (ಕರ್ನಾಟಕ ವಾರ್ತೆ): ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ರಾಯಚೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ-2026ರ ಅಂಗವಾಗಿ ಫೆಬ್ರವರಿ 07ರಂದು ಮಧ್ಯಾಹ್ನ 4ರಿಂದ 5ರವರೆಗೆ ನಗರದ ಜಿಲ್ಲಾ ಕಾರಾಗೃಹ ಹತ್ತಿರದ ಮಹಿಳಾ ಸಮಾಜ ಆವರಣದಲ್ಲಿ ಸಂವಾದ ಗೋಷ್ಠಿ ನಡೆಯಲಿದೆ.

ಸಾಮಾಜಿಕ ಚಿಂತಕರು ಹಾಗೂ ಹೋರಾಟಗಾರರಾದ ಡಾ.ಬಸವರಾಜ ಕಳಸ ಅವರು ಕಾರ್ಯಕ್ರಮ ಆಶಯ ನುಡಿ ಹೇಳಲಿದ್ದಾರೆ.

ಕಲಬುರಗಿ ವಿಭಾಗದ ಕರ್ನಾಟಕ ಮಾಹಿತಿ ಆಯೋಗ ರಾಜ್ಯ ಮಾಹಿತಿ ಆಯುಕ್ತರಾದ ಬಿ.ವೆಂಕಟಸಿಗ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು.

ಹಿರಿಯ ಸಾಹಿತಿಗಳು ಮತ್ತು ಚಿಂತಕರಾದ ರಾಘವೇಂದ್ರ ಕುಷ್ಟಗಿ ಅವರು ಅಧ್ಯಕ್ಷತೆವಹಿಸುವರು.

ಮುಖ್ಯ ಅತಿಥಿಗಳಾಗಿ ಕೃಷಿ ವಿವಿಯ ಕುಲಪತಿ ಡಾ.ಹನುಮಂತಪ್ಪ ಎಂ., ಆದಿಕವಿ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶಿವಾನಂದ ಕೆಳಗಿನಮನಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಶು ಗಿರಿ, ರಾಯಚೂರು ಸಹಾಯಕ ಆಯುಕ್ತರರಾದ ಡಾ.ಹಂಪಣ್ಣ ಸಜ್ಜನ್, ಸಾಹಿತಿಗಳಾದ ವೀರ ಹನುಮಾನ, ಅವರು ಪಾಲ್ಗೊಳ್ಳುವರು.

ವಾರ್ತಾ ಇಲಾಖೆಯ ಗವಿಸಿದ್ದಪ್ಪ ಹೊಸಮನಿ ಅವರು ಕಾರ್ಯಕ್ರಮದ ನಿರೂಪಣೆ, ಶಿಕ್ಷಣ ಇಲಾಖೆಯ ಸಿಆರ್‌ಪಿ ರಾವುತ್ ರಾವ್ ಬರೂರ ಅವರು ಸ್ವಾಗತ ಹಾಗೂ ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆಯ ಅಧಿಕಾರಿಗಳಾದ ಸದಾಶಿವಪ್ಪ ಅವರು ವಂದನಾರ್ಪಣೆ ಮಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಕಾವ್ಯವು ಮಾನವೀಯ ಮೌಲ್ಯ ಮತ್ತು ಸೌಹಾರ್ದತೆಯನ್ನು ಬೆಳೆಸುವ ಬಲಿಷ್ಠ ಅಸ್ತ್ರವಾಗಿದೆ - ರಂಗಣ್ಣ ಪಾಟೀಲ್ ಅಳ್ಳುಂಡಿ

ರಾಯಚೂರು ಫೆಬ್ರುವರಿ 05

ಕಾವ್ಯವು ಸಮಾಜದಲ್ಲಿ ಮಾನವೀಯ ಮೌಲ್ಯಗಳು ಮತ್ತು ಸೌಹಾರ್ದತೆಯನ್ನು ಬೆಳೆಸುವ ಬಲಿಷ್ಠ ಅಸ್ತ್ರವಾಗಿದೆ ಎಂದು ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ರಂಗಣ್ಣ ಪಾಟೀಲ್ ಅಳ್ಳುಂಡಿ ಹೇಳಿದರು.



ಅವರು ಗುರುವಾರ ರಾಯಚೂರು ಮಹಿಳಾ ಸಮಾಜ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ರಾಯಚೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ-2026ರ ಪ್ರಯುಕ್ತ ಹಮ್ಮಿಕೊಂಡಿದ್ದ ಕವಿಗೋಷ್ಠಿ ಉದ್ಘಾಟಿಸಿ ಮಾತನಾಡಿದರು.

ರಾಯಚೂರು ಜಿಲ್ಲೆಯ ಕಾವ್ಯ ಪರಂಪರೆ ಅತ್ಯಂತ ಶ್ರೀಮಂತವಾಗಿದ್ದು, ಇತ್ತೀಚಿನ ದಿನಗಳಲ್ಲಿ ಹಿರಿಯರು ಮತ್ತು ಕಿರಿಯರು ತಮ್ಮ ತಮ್ಮ ಕಾವ್ಯ ಸೃಜನಶೀಲತೆಯ ಮೂಲಕ ರಾಜ್ಯದ ಗಮನ ಸೆಳೆಯುತ್ತಿರುವುದು ನಮಗೆಲ್ಲ ಅಪಾರ ಸಂತೋಷ ನೀಡುತ್ತಿದೆ. ಓದುಗರು ಮತ್ತು ಬರಹಗಾರರು ಸದಾ ಸಮಾಜದ ಒಳಿತನ್ನು ಬಯಸುವ ಸಹೃದಯಿಗಳಾಗಿರಬೇಕು. ಕವಿತೆ ಪ್ರಾಮಾಣಿಕ ಮನಸ್ಸಿನ ಅಭಿವ್ಯಕ್ತಿಯಾಗಿದ್ದು, ಕವಿ ಸಮಾಜದಲ್ಲಿ ನಡೆಯುವ ಘಟನೆಗಳಿಗೆ ಸ್ಪಂದಿಸಿ ತನ್ನ ಅನುಭವಗಳನ್ನು ಹೃದಯಸ್ಪರ್ಶಿಯಾಗಿ ವ್ಯಕ್ತಪಡಿಸಬೇಕಾಗಿದೆ ಎಂದರು.

ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವಕ್ಕೆ ಅಧಿಕೃತವಾಗಿ ಚಾಲನೆ ನೀಡಲಾಗಿದ್ದು, ಇದರ ಅಂಗವಾಗಿ ನಿನ್ನೆ ಮಕ್ಕಳ ಹಬ್ಬವನ್ನು ಅತ್ಯಂತ ಉತ್ಸಾಹ ಹಾಗೂ ಸಂಭ್ರಮದಿಂದ ಆಚರಿಸಲಾಯಿತು. ರಾಯಚೂರು ಉತ್ಸವವು ಜನಮನದಲ್ಲಿ ಸಂತೋಷದ ಹಬ್ಬವಾಗಿ ಮೂಡಿಬಂದಿದ್ದು ಇದರ ಭಾಗವಾಗಿ ಕವಿ ಗೋಷ್ಠಿಯನ್ನು ಉದ್ಘಾಟಿಸಲಾಗಿದೆ. ಕವಿ ಗೋಷ್ಠಿಗಾಗಿ ಜಿಲ್ಲಾಡಳಿತದ ವತಿಯಿಂದ ಪತ್ರಿಕಾ ಪ್ರಕಟಣೆ ಮೂಲಕ ಕವಿಗಳನ್ನು ಆಹ್ವಾನಿಸಲಾಗಿದ್ದು, ಇದಕ್ಕೆ ಸ್ಪಂದಿಸಿ ನೂರಾರು ಕವಿಗಳು ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದಾರೆ. ನೋಂದಾಯಿತ ಕವಿಗಳನ್ನು ಹಿರಿಯ ಸಾಹಿತಿಗಳು, ಯುವ ಕವಿಗಳು, ಮಹಿಳಾ ಕವಿಗಳು ಹಾಗೂ ತುರ್ತು ಕವಿಗಳು ಎಂದು ವಿಂಗಡಣೆ ಮಾಡಿ, ನಾಲ್ಕು ಪ್ರತ್ಯೇಕ

3ನೇ ಪುಟಕ್ಕೆ

ರೈತೋಪಯೋಗಿ ಕೃಷಿ ಮೇಳಕ್ಕೆ ರೈತರ ಅಭೂತಪೂರ್ವ ಸ್ಪಂದನೆ

ರಾಯಚೂರು ಫೆ. 05 :

ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ಅಂಗವಾಗಿ ಇಲ್ಲಿನ ಕೃಷಿ ವಿಶ್ವವಿಶ್ವವಿದ್ಯಾಲಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿರುವ ಕೃಷಿ ಮೇಳಕ್ಕೆ ರೈತರಿಂದ ಅಭೂತಪೂರ್ವ ಸ್ಪಂದನೆ ದೊರೆತಿದ್ದು, ಕೃಷಿ ಮೇಳಕ್ಕೆ ಜಿಲ್ಲಾ ಉಸ್ತುವಾರಿಸಚಿವರು ಹಾಗೂ ವೈದ್ಯಕೀಯ ಶಿಕ್ಷಣ ಸಚಿವರಾದ ಡಾ. ಶರಣಪ್ರಕಾಶ್ ಪಾಟೀಲ್ ಅವರು ಗುರುವಾರ ಉದ್ಘಾಟಿಸಿದರು.

ಕೃಷಿ ಮೇಳಕ್ಕೆ ಆಹ್ವಾನಿಸುವ ಸ್ವಾಗತ ಕಮಾನನ್ನು ವಿಶಿಷ್ಟ ರೀತಿಯಲ್ಲಿ ನಿರ್ಮಿಸಿದ್ದು, ರೈತರನ್ನು ಕೈಬೀಸಿ ಕರೆಯುವಂತಿದೆ. ಕೃಷಿ ಮೇಳದಲ್ಲಿ ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಪಶುಪಾಲನೆ ಮತ್ತು ಪಶು ವೈದ್ಯಕೀಯ ಸೇವೆಗಳ



ಇಲಾಖೆ ಸೇರಿದಂತೆ ರೈತರಿಗೆ ಸಂಬಂಧಿಸಿದ ಹಲವಾರು ಇಲಾಖೆಗಳು ಮಳಿಗೆಗಳನ್ನು ಸ್ಥಾಪಿಸಿ ರೈತರಿಗೆ ಅಗತ್ಯವಿರುವ ಮಾಹಿತಿಯನ್ನು ಒದಗಿಸುವ ಕಾರ್ಯ ಮಾಡುತ್ತಿವೆ. ಇದರ ಜೊತೆಗೆ ಕೃಷಿ ವಿಶ್ವವಿದ್ಯಾಲಯವು ಕೃಷಿ ಮೇಳದ ಅವಕಾಶವನ್ನು ನಿಜಕ್ಕೂ ಸಮರ್ಥವಾಗಿ ಬಳಸಿಕೊಂಡಿದ್ದು, ಕೃಷಿ ವಿ.ವಿ. ರೈತ ಕೇಂದ್ರೀಕೃತ ಚಟುವಟಿಕೆಗಳನ್ನು ಕೃಷಿ ಮೇಳದಲ್ಲಿ ವ್ಯಾಪಕವಾಗಿ ಪರಿಚಯಿಸುವ ಕಾರ್ಯವನ್ನು ನಿಜಕ್ಕೂ ಯಶಸ್ವಿಯಾಗಿ ಅನುಷ್ಠಾನಗೊಳಿಸಿದೆ. ಜಲಾನಯನ ಅಭಿವೃದ್ಧಿ ಯೋಜನೆಯಡಿ ವಿವಿಧ ಬಗೆಯ ಮಣ್ಣುಗಳ ಮಾದರಿ ಹಾಗೂ ಮಣ್ಣುಗಳಿಗೆ ಪೂರಕವಾಗಿರುವ ಬೆಳೆ ಪದ್ಧತಿಯನ್ನು ರೈತರಿಗೆ ಪರಿಚಯಿಸುವ ಕಾರ್ಯ ನಡೆದಿದೆ. ಮಣ್ಣು ಮತ್ತು ನೀರು ಸಂರಕ್ಷಣೆ ವಿಭಾಗದ ವತಿಯಿಂದ ಸವಳು ಜವಳು ಮಣ್ಣನ್ನು ಫಲವತ್ತುಗೊಳಿಸುವುದು, ನೀರನ್ನು ವ್ಯರ್ಥವಾಗಿ ಹರಿಯಬಿಡದೆ, ಸಮರ್ಪಕವಾಗಿ ಬಳಸುವ ಕಾರ್ಯಕ್ಕೆ ಒತ್ತು ನೀಡುವಂತಹ ಮಾಹಿತಿಯನ್ನು ರೈತರಿಗೆ ಒದಗಿಸಲಾಗುತ್ತಿದೆ. ಇದರ ಜೊತೆಗೆ ಭತ್ತ, ಹತ್ತಿ, ಬೇಳೆಕಾಳು, ಎಣ್ಣೆಕಾಳುಗಳು, ಸಿರಿಧಾನ್ಯಗಳ ವಿವಿಧ ಬಗೆಯ ತಳಿಗಳ ಪರಿಚಯವನ್ನು ಕೃಷಿ ಮೇಳದಲ್ಲಿ ಮಾಡಿಕೊಡಲಾಗಿದೆ. ಸೂರ್ಯಕಾಂತಿ ಬೆಳೆಯನ್ನು ಲಾಭದಾಯಕಗೊಳಿಸಲು ಬೇಕಾದ ಕೃಷಿ ಪದ್ಧತಿಯನ್ನು ರೈತರಿಗೆ ಪರಿಚಯಿಸಲಾಗುತ್ತಿದೆ. ನೈಸರ್ಗಿಕ ವಿಪತ್ತು ಮತ್ತು ಕೃಷಿ ಹವಾಮಾನ ವಿಭಾಗದಿಂದ ರೈತರು ವಿವಿಧ ಬಗೆ ಪರಿಸ್ಥಿತಿಗಳಲ್ಲಿ ಅನುಸರಿಸಬೇಕಾದ ಬೇಸಾಯ ಕ್ರಮಗಳನ್ನು ತಿಳಿಸಿಕೊಡುವ ಕಾರ್ಯ ಕೃಷಿ ಮೇಳದಲ್ಲಿ ಮಾಡಿದೆ. ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರವು ಕೂಡ ಕೃಷಿಗೆ ಸಂಬಂಧಿಸಿದಂತೆ ಹೆಚ್ಚು ಹೆಚ್ಚು ಮಾಹಿತಿಯನ್ನು ರೈತರಿಗೆ ತಲುಪಿಸುವ ಕಾರ್ಯವನ್ನು ಕೃಷಿ ಮೇಳದಲ್ಲಿ ಹಮ್ಮಿಕೊಂಡಿದೆ. ಕೃಷಿ ಮೇಳದಲ್ಲಿ ವಿಸ್ಮಯಕಾರಿ ಕೀಟ ಪ್ರಪಂಚ ನೋಡುಗರನ್ನು ಆಕರ್ಷಿಸುತ್ತಿದ್ದು, ಕೀಟಗಳ ಜೀವ ವಿಧಾನ, ಹಾಗೂ ಕೀಟ ವೈವಿಧ್ಯಗಳನ್ನು ತಿಳಿದುಕೊಳ್ಳಲು ಒಳ್ಳೆಯ ವೇದಿಕೆ ಮಾಡಿಕೊಟ್ಟಿದೆ. ಕೃಷಿ ಮೇಳದಲ್ಲಿ ವಿವಿಧ ಬಗೆಯ ಬಿತ್ತನೆ ಬೀಜಗಳ ತಳಿಗಳು,

3ನೇ ಪುಟಕ್ಕೆ

ಫೆ.07ರಂದು ಮಹಿಳಾ ಸಮಾಜ ಆವರಣದಲ್ಲಿ ದಾಸ ಸಾಹಿತ್ಯ ಗೋಷ್ಠಿ

ರಾಯಚೂರು,ಫೆ.05

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ರಾಯಚೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ-2026ರ ಅಂಗವಾಗಿ ಫೆಬ್ರವರಿ 07ರಂದು ಮಧ್ಯಾಹ್ನ 2.30ರಿಂದ 4ರವರೆಗೆ ನಗರದ ಜಿಲ್ಲಾ ಕಾರಾಗೃಹ ಹತ್ತಿರದ ಮಹಿಳಾ ಸಮಾಜ ಆವರಣದಲ್ಲಿ ದಾಸ ಸಾಹಿತ್ಯ ಗೋಷ್ಠಿ ನಡೆಯಲಿದೆ.

ಡಾ.ರವೀಂದ್ರ ಕುಷ್ಟಗಿ ಅವರು ಉದ್ಘಾಟನೆ ನೆರವೇರಿಸುವರು.ಹರಿದಾಸ ಚಿಂತಕರು ಹಾಗೂ ದಾಸ ಸಾಹಿತ್ಯದ ಚಲನಚಿತ್ರ ನಿರ್ಮಾಪಕರಾದ ಡಾ. ತ್ರಿವಿಕ್ರಮ ಜೋಶಿ ಅವರು ಅಧ್ಯಕ್ಷತೆ ವಹಿಸುವರು.

ರಾಯಚೂರು ತಹಶೀಲ್ದಾರ್ ಸುರೇಶ ವರ್ಮಾ, ಜಿಲ್ಲಾ ಕೇಂದ್ರ ಗ್ರಂಥಾಲಯದ ಮುಖ್ಯ ಅಧಿಕಾರಿ ಸಿದ್ಧಾರ್ಥ ಭಾವಿಕಟ್ಟಿ, ದೇವದುರ್ಗ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷರಾದ ಎಚ್.ಶಿವರಾಜ ಅವರು ಗೌರವ ಉಪಸ್ಥಿತಿ ವಹಿಸುವರು.

ದಾಸ ಸಾಹಿತ್ಯ ಗೋಷ್ಠಿಯಲ್ಲಿ ಕನ್ನಡ ಸಾಹಿತ್ಯಕ್ಕೆ ಹರಿದಾಸರ ಕೊಡುಗೆ ಕುರಿತು ಕಲ್ಲೂರಕರ ನಿವೃತ್ತ ಪ್ರಾಚಾರ್ಯರು ಹಾಗೂ ಸಾಹಿತಿಗಳಾದ ಡಾ.ರಾಜಶ್ರೀ ಅವರು ಉಪನ್ಯಾಸ ನೀಡುವರು.

ದಾಸ ಸಾಹಿತ್ಯದಲ್ಲಿ ಸಾಮಾಜಿಕ ಮೌಲ್ಯಗಳು ಮತ್ತು ಪ್ರಸ್ತುತತೆ ಕುರಿತು ಹಿರಿಯ ಸಾಹಿತಿಗಳಾದ ಡಾ.ರೇಣುಕಾ ಎಂ.ಸ್ವಾಮಿ ಅವರು ಉಪನ್ಯಾಸ ನೀಡುವರು.

ದಾಸ ಸಾಹಿತ್ಯದ ಬೆಳವಣಿಗೆಯಲ್ಲಿ ಮಹಿಳೆಯರ ಕೊಡುಗೆ ಕುರಿತು ಹಿರಿಯ ಲೇಖಕಿ ಡಾ.ಮಧುಮತಿ ದೇಶಪಾಂಡೆ ಅವರು ಉಪನ್ಯಾಸ ನೀಡುವರು.

ರಾಯಚೂರು ಜಿಲ್ಲೆಯ ಹರಿದಾಸರು ಕುರಿತು ರಾಯಚೂರಿನ ಕಾನೂನು ಮಹಾವಿದ್ಯಾಲಯದ ಉಪನ್ಯಾಸಕರಾದ ಡಾ.ವಸುಂಧರಾ ಪಾಟೀಲ ಅವರು ಉಪನ್ಯಾಸ ನೀಡುವರು.

ಮುರಳೀಧರ ಕುಲಕರ್ಣಿ ಅವರು ನಿರೂಪಣೆ, ಶ್ರೀನಿವಾಸ ಗಟ್ಟು ಅವರು ಸ್ವಾಗತ ಹಾಗೂ ಜೆ.ಎಂ.ವಿರೇಶ್ ಅವರು ವಂದನಾರ್ಪಣೆ ಮಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನೂತನ ಶಾಲಾ ಕಟ್ಟಡಕ್ಕೆ ಭೂಮಿ ಪೂಜೆ

ಗುಣಮಟ್ಟದ ಶಿಕ್ಷಣಕ್ಕೆ ಹೆಸರಾದ ವಿದ್ಯಾ ಪ್ರಸಾರಕ ಮಂಡಳ

-ಮಾಜಿ ಸಚಿವ ಅರವಿಂದ ಲಿಂಬಾವಳಿ



ಬಾಗಲಕೋಟೆ,ಫೆ.05-

ವಿದ್ಯಾಪ್ರಸಾರಕ ಮಂಡಳದ ಶಾಲಾ, ಕಾಲೇಜುಗಳು ಗುಣಮಟ್ಟದ ಶಿಕ್ಷಣಕ್ಕೆ ಹೆಸರಾಗಿವೆ ಎಂದು ಮಾಜಿ ಸಚಿವ ಅರವಿಂದ ಲಿಂಬಾವಳಿ ಬಣ್ಣಿಸಿದರು.

ನವನಗರದ 110ನೇ ಸೆಕ್ಟರಿನ ಡಾ.ಎಚ್.ಎಂ.ಶಿರ'ೂರ' ಆವರಣದಲ್ಲಿ ವಿದ್ಯಾಪ್ರಸಾರಕ ಮಂಡಳದ ಆಕ್ಟ್ ಅಮೃತಾ ಅಂತಾರಾಷ್ಟ್ರೀಯ ಶಾಲಾ ಕಟ್ಟಡಕ್ಕೆ ತಮ್ಮ ತಾಯಿ ದಿ.ಭೀಮಾ ಬಾಯಿ ಮತ್ತು ತಂದೆ ದಿ.ವೆಂಕಟರಾವ ಭೀಮರಾವ್ ಲಿಂಬಾವಳಿ ಸ್ಮರಣಾರ್ಥ ದೇಣಿಗೆ ನೀಡಿದ ಅವರು ಕಟ್ಟಡ ನಿರ್ಮಾಣಕ್ಕೆ ಪೂಜೆ ನೆರವೇರಿಸಿದರು.

ತಾವು ಶಂಕ್ರಪ್ಪ ಸಕ್ರಿ ಹೈಸ್ಕೂಲಿನ ಹೆಮ್ಮೆಯ ವಿದ್ಯಾರ್ಥಿ ಎಂದು ನೆನಪಿಸಿಕೊಂಡ ಅವರು, ವಿದ್ಯಾರ್ಥಿಗಳ ಶುಲ್ಕ ಹೆಚ್ಚಿಸಿ ಕಟ್ಟಡದ ಹೊರೆಯನ್ನು ಪಾಲಕರ ಮೇಲೆ ಹಾಕಬಹುದಿತ್ತು. ಆದರೆ ಅನ್ನದಾನ, ವಿದ್ಯಾದಾನ ಶ್ರೇಷ್ಠ ಎಂದು ಭಾವಿಸಿರುವ ಸಂಸ್ಥೆ ಇಂದಿಗೂ ಸೇವಾ ಮನೋಭಾವದಿಂದ ಮುಂದ ವರಿಯುತ್ತಿರುವುದು ಹೆಮ್ಮೆಯ ಸಂಗತಿ ಎಂದು ಹೇಳಿದರು.

ನಗರದಲ್ಲಿ ಸಂಸ್ಥೆಯ ಹಳೆ ಕ್ಯಾಂಪಸ್ ಇದ್ದು, ಮುಳುಗಡೆ ಯಿಂದಾಗಿ ಅಲ್ಲಿ ಅಭಿವೃದ್ಧಿಗೆ ಅವಕಾಶವಿಲ್ಲ. ಹೀಗಾಗಿ ನವನಗರದಲ್ಲಿ ಶಾಲಾ ಕಟ್ಟಡ ನಿರ್ಮಾಣಕ್ಕೆ ಮುಂದಾಗುತ್ತಿರುವುದು ಸೂಕ್ತ. ಸಂಸ್ಥೆ ಹಳೆ ಮೆರಗು ಪಡೆದುಕೊಂಡು ಬೆಳೆಯಬೇ ಕೆಂದು ಹೇಳಿದರು.

ಸಂಸ್ಥೆಯ ವಾಣಿಜ್ಯ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಶ್ರೀನಿವಾಸ ನರಗುಂದ ಮಾತನಾಡಿ, ವಿದ್ಯಾ ಪ್ರಸಾರಕ ಮಂಡಳ ತನ್ನ 90ರ ಸಂಭ್ರಮದಲ್ಲಿದೆ. ಅರವಿಂದ ಲಿಂಬಾವಳಿ ಅವರು ಈ ಸಂಸ್ಥೆಯ ಹಳೆ ವಿದ್ಯಾರ್ಥಿ ಅವರು ತಮ್ಮ ಪಾಲಕರ ಹೆಸರಿನಲ್ಲಿ 50 ಲಕ್ಷ ರೂ.ಗಳ ದೇಣಿಗೆಯನ್ನು ಚೆಕ್ ಮುಖಾಂತರ ನೀಡಿದ್ದಾರೆ. ಇನ್ನೂ ಬೆಂಬಲವಾಗಿ ನಿಲ್ಲುವ ಭರವಸೆ ನೀಡಿ ರುವುದು ಖುಷಿಯ ಸಂಗತಿ ಎಂದರು. ಡಾ.ಗಿರೀಶ ಮಸೂರಕರ ಅವರು ಮಾತನಾಡಿ, ಅರವಿಂದ ಲಿಂಬಾವಳಿ ಅವರು ಸಂಸ್ಥೆಯ ಹಳೆ ವಿದ್ಯಾರ್ಥಿ. ತಾವು ಕಲಿತ ಶಾಲೆಗೆ ಏನನ್ನಾದರೂ ಕೊಡುಗೆ ನೀಡಬೇಕೆಂದು ಬಯಸಿ ಅವರು ನೆರವಾಗುತ್ತಿರುವುದು ಖುಷಿ ಯ ವಿಷಯ ಎಂದು ಹೇಳಿದರು.

ಪಂ. ಭೀಮಸೇನಾಚಾರ್ಯ ಪಾಂಡುರಂಗಿ, ಪಂ.ಬಿಂದುಮಾಧ ವಾಚಾರ್ಯ ನಾಗಸಂಪಿಗೆ, ಸಂಸ್ಥೆಯ ಅಧ್ಯಕ್ಷ ವಾಮನ್‌ರಾವ್ ಕವಟೇಕರ್, ಉದ್ಯಮಿ ಹಿತೇಶ ಪಟೇಲ್ ಮತ್ತಿತ ರರು ವೇದಿಕೆಯಲ್ಲಿದ್ದರು.

ಶಿಕ್ಷಣ ತಜ್ಞೆ ಡಾ.ಮೀನಾ ಚಂದಾವರ್ಕರ, ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ನಾಗರಾಜ ಹದ್ಲಿ, ಸಂಸ್ಥೆಯ ಸದಸ್ಯರಾದ ಎಸ್.ಕೆ. ಕುಲಕರ್ಣಿ, ವಿನಾಯಕ ತಾಳಿಕೋಟಿ, ಗಿರೀಶ ಆಶ್ರಿತ, ಆನಂದ ಕಲ್ಮಡಿ ಮತ್ತಿತರರು ಇದ್ದರು.

ಆರ್ಥಿಕ ಸದೃಢವಾಗಿದ್ದವರು ಕೈಗಾರಿಕೆ ವಲಯದಲ್ಲಿ ಹೂಡಿಕೆ ಮಾಡಿ ಸ್ಥಳೀಯರಿಗೆ ಉದ್ಯೋಗಾವಕಾಶ ಕಲ್ಪಿಸಲು ಕರೆ



ಯಾದಗಿರಿ,ಫೆ.05-

ಶಹಾಪೂರ ತಾಲ್ಲೂಕಿನಲ್ಲಿ ಕೈಗಾರಿಕೆಗಳ ಬೆಳವಣಿಗೆ ಸಾಕಷ್ಟು ಅವ ಕಾಶಗಳಿದ್ದು, ಆರ್ಥಿಕ ಸದೃಢವಾಗಿದ್ದ ವರು ಬೇರೆ ವಲಯದಲ್ಲಿ ಹೂಡಿಕೆ ಮಾಡುವ ಬದಲಾಗಿ ಕೈಗಾರಿಕೆ ವಲಯದಲ್ಲಿ ಹೂಡಿಕೆ ಮಾಡಿದ್ದಲ್ಲಿ ಸ್ಥಳೀಯರಿಗೆ ಉದ್ಯೋಗಾವಕಾಶ ಗಳು ಸೃಷ್ಟಿ ಹಾಗೂ ಆರ್ಥಿಕವಾಗಿ ಬೆಳವಣಿಗೆವಾಗುತ್ತದೆ ಎಂದು ಯಾದಗಿರಿ ಜಿಪಂ (ಗ್ರಾಕೈ) ಉಪ ನಿರ್ದೇಶಕರು ಮುಕುಂದ ರೆಡ್ಡಿ ಪಾಟೀಲ್ ಝೆಡ್ ಆ್ಯಂಡ್ ಲೀನ್ ಕುರಿತು ಉದ್ಯಮಿದಾರರಿಗೆ ಕರೆ ನೀಡಿದರು.

ಶಹಾಪೂರ ನಗರದಲ್ಲಿ ಇತ್ತೀಚಿನ ಕಾರ್ಯಕ್ರಮ ಯಾದಗಿರಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಜಿಲ್ಲಾ ಕೈಗಾರಿಕೆ ಕೇಂದ್ರ, ತಾಲೂಕುಗಳ ಕೈಗಾರಿಕಾ ಯಾದಗಿರಿ, ಸುರಪುರ, ಶಹಾಪೂರ ಬೆಂಗಳೂರು ಅಸೋಸಿ ಯೇಶನ್, ಕೆ.ಎಸ್.ಎಂ.ಸಿ.ಎ ಸಂಯು ಕ್ತಾಶ್ರಯದಲ್ಲಿ ಎಂ.ಎಸ್. ಎಂ.ಇಗಳ ಕಾರ್ಯಕ್ರಮತೆಯನ್ನು ಹೆಚ್ಚಿಸುವುದು ಮತ್ತು ವೇಗಗೊ ಳಿಸುವುದು ರ್‍ಯಾಂಪ್ ಯೋಜನೆಯ ಡಿಯಲ್ಲಿ ಝೆಡ್ ಆ್ಯಂಡ್ ಲೀನ್ ಕುರಿತು ಒಂದು ದಿನದ ಅರಿವು ಮೂಡಿಸುವ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾ ಡಿದರು.

ಯಾದಗಿರಿ ಜಿಲ್ಲೆಯ ಭಾಗದಲ್ಲಿ ಹೆಚ್ಚು ಹತ್ತಿ ಕಾರ್ಖಾನೆಗಳು ಬರುತ್ತಿದ್ದು ಈ ಒಂದು ಝೆಡ್ ಆ್ಯಂಡ್ ಲೀನ್ ವಿಷಯಗಳ ಬಗ್ಗೆ ತಿಳಿದುಕೊಳ್ಳಬೇಕೆಂದು ಉದ್ಯಮಿದಾರರಿಗೆ ವಿನಂತಿಸಿದರು. ಇದರಿಂದ ಸರ್ಕಾರ ಯೋಜನೆಯ ಬಗ್ಗೆ ಮಾಹಿತಿ ಪಡೆಯಲು ಅನುಕೂಲವಾಗುತ್ತದೆ ಎಂದರು.

ಯಾದಗಿರಿ ಜಿಲ್ಲಾ ಕೈಗಾರಿಕಾ ಕೇಂದ್ರ ಜಂಟಿ ನಿರ್ದೇಶಕರು ಬಿ.ಸತೀಶಕುಮಾರ ಅವರು ಮಾತನಾಡಿದರು, ಈ ರ್‍ಯಾಂಪ್ ಯೋಜನೆಯು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಎಂ.ಎಸ್.ಎಂ.ಇಗಳ ಉತ್ತೇಜಿಸಲು ಅರಿವು ಮೂಡಿಸುವ ಕಾರ್ಯಾಗಾರ ಜರಗುಸಲಾಗುತ್ತಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಾಗಾರ ಗಳಲ್ಲಿ ಭಾಗವಹಿಸಿ ಯೋಜನೆ ಬಗ್ಗೆ ಮಾಹಿತಿ ಪಡೆಯಬೇಕೆಂದು ಯಾದಗಿರಿ ಜಿಲ್ಲೆಯ ಉದ್ಯಮಿದಾರರಿಗೆ ತಿಳಿಸಿದರು. ಬೆಂಗಳೂರು ನಾಮ ನಿರ್ದೇಶನ ಗೊಂಡ ಝೆಡ್ ತಜ್ಞ, ಝೆಡ್ ಪ್ರಮಾಣ ಪತ್ರ, ಬೆಂಗಳೂರು ಎಂಎಸ್‌ಎಂಇ ಯೋಜನೆಯ ಪ್ರಸ್ತುತಿ ರಾಧಾ ಲೀನ್ ಬಗ್ಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು ಹಾಗೂ ಯಾದ ಗಿರಿ ಜಿಲ್ಲಾ ಉಸ್ತುವಾರಿ ಸಚಿವ ರಾದ ಶರಣಬಸಪ್ಪ ದರ್ಶನಾಪೂರ, ಯಾದಗಿರಿ ಜಿಲ್ಲಾ ಕಾಟನ್ ಜಿನ್ನಿಂಗ್ ಅಸೋಶಿಯನನ್ ಹಾಗೂ ವ್ಯವಸ್ಥಾಪಕ ಪಾಲುದಾರರು ಕಾರ್ಯದರ್ಶಿಗಳು ಗುರುಮಣಿಕಂಠ, ಶಹಾಪೂರ ಕಾಟನ್ ಜಿನ್ನಿಂಗ್ ಇಂಡಸ್ಟ್ರೀಸ್ ಶಿವಮಣಿಕಂಠ, ಶಹಾಪೂರ ನಗರ ಅಭಿವೃದ್ಧಿ ಪ್ರಾಧಿಕಾರ ಮಾಜಿ ಅಧ್ಯಕ್ಷರು ಹಾಗೂ ಉದ್ಯಮಿ ಮುಸ್ತಫಾ ದರ್ಬಾನ್, ಸೇವಾ ಲಿಮಿಟೆಡ್ ಕೂಸಿಐ ಅಸಿ ಸ್ಟೆಂಟ್ ಮೇಲ್ವಿಚಾರಕರು ತಪಾಸಣೆ ಜ್ಯೋತಿ ಕೃಷ್ಣ, ಸಹಾಯಕ ನಿರ್ದೇ ಶಕರು ಎಂ.ಎ.ಸಲೀಮ್ ಸ್ವಾಗತಿಸಿ ದರು. ಸಹಾಯಕ ನಿರ್ದೇಶಕರು ಮಹೇಶ ವಂದನಾರ್ಪಣೆ ನೆರವೇರಿ ಸಿದರು.

ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆಯಿರಿ- ಶರಣೇಗೌಡ

ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳಿಗೆ ವಿಶೇಷ ಪರೀಕ್ಷಾ ಕಾರ್ಯಕ್ರಮ



ಗಂಗಾವತಿ,ಫೆ.05-

ನಗರದ ಕೊಟ್ಟೂರೇಶ್ವರ ವಿದ್ಯಾವರ್ಧಕ ಸಂಘದ ಗುಂಜಹಳ್ಳಿ ಹಿರೇನಾಗಪ್ಪ ವಾಣಿಜ್ಯ ಮಹಾವಿದ್ಯಾಲಯದಲ್ಲಿ ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳಿಗೆ ವಿಶೇಷ ಪರೀಕ್ಷಾ ಕಾರ್ಯಕ್ರಮ ಜರುಗಿತು.

ಈ ಪರೀಕ್ಷೆಯು ದ್ವಿತೀಯ ಪಿ.ಯು.ಸಿ ವಿಷಯದ ಪಠ್ಯಾಧಾರಿತ ಹಾಗೂ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದು ಪ್ರಥಮ ಸ್ಥಾನ ಪಡೆದವರಿಗೆ ರೂ. 3000, ದ್ವಿತೀಯ ಸ್ಥಾನ ರೂ. 2000 ಹಾಗೂ ತೃತೀಯ ಸ್ಥಾನ ರೂ. 1000 ಗಳ ಬಹುಮಾನವನ್ನು ನಿಗದಿಪಡಿಸಲಾಗಿತ್ತು. ಈ ಪರೀಕ್ಷೆಯಲ್ಲಿ ಸುಮಾರು 200 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ಡಾ. ಕೊಟ್ಟೂರು ಮಹಾಸ್ವಾಮಿಗಳು ಸಾನಿಧ್ಯವನ್ನು ವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಕಾರ್ಯದರ್ಶಿಗಳಾದ ಶರಣೆಗೌಡ ಮಾಲಿಪಾಟೀಲ್ ವಹಿಸಿ, ವಿದ್ಯಾರ್ಥಿಗಳಿಗೆ ಕಾರ್ಯ ಕ್ರಮದ ಪ್ರಾಮುಖ್ಯತೆಯನ್ನು ತಿಳಿಸಿ ಸದುಪಯೋಗ ಪಡಿಸಿಕೊಳ್ಳುವಂತೆ ಹೇಳಿದರು.

ಕಾಲೇಜಿನ ಪ್ರಾಂಶುಪಾಲರಾದ ಶರಣಬಸವಯ್ಯ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ಕಾಲೇಜಿನ ಸಾಧನೆಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು ಹಾಗೂ ಕಾಲೇಜಿನ ಮುಂದಿನ ಯೋಜನೆಗಳನ್ನು ಪ್ರಸ್ತುತಪಡಿಸಿದರು. ವೇದಿಕೆಯ ಪ್ರಾಧ್ಯಾಪಕರಾದ ವೆಂಕಟೇಶ, ಸೋಮನಗೌಡ, ಕನ್ನಡ ಉಪನ್ಯಾಸಕರಾದ ವಾಣಿಶ್ರೀ ಪಾಟೀಲ್ ಉಪಸ್ಥಿತರಿದ್ದರು.

ಈ ಕಾರ್ಯಕ್ರಮದಲ್ಲಿ ಜಯಲಕ್ಷ್ಮಿ ಅವರು ನಿರೂಪಿಸಿದರೆ, ಪರಮೇಶ್ವರಗೌಡ ಪಾಟೀಲ್ ಅವರು ಸ್ವಾಗತಿಸಿದರು ಹಾಗೂ ದಾದಾ ಖಲಂದರ್ ವಂದಿಸಿದರು.

7 ರಂದು ಜಾನಪದ ಸಂಗೀತ ಗಾಯನ ಮತ್ತು ಶಾಸ್ತ್ರೀಯ ನೃತ್ಯ ಪ್ರದರ್ಶನ ಕಾರ್ಯಕ್ರಮ

ಬಳ್ಳಾರಿ,ಫೆ.05-

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಫೆ.07 ರಂದು ಸಂಜೆ 06 ಗಂಟೆಗೆ ನಗರದ ಡಾ.ರಾಜ್ ಕುಮಾರ್ ರಸ್ತೆಯ ಸಾಂಸ್ಕೃತಿಕ ಸಮುಚ್ಚಯದ ನಾಡೋಜ ಸುಭದ್ರಮ್ಮ ಮಾನ್ಸೂರ್ ಬಯಲು ರಂಗಮಂದಿರದಲ್ಲಿ ವಿಶೇಷ ಘಟಕ ಯೋಜನೆಯಡಿ ಕಲಿಕಾ ತರಬೇತಿ ಪಡೆದ ಡಾ.ಬಿ.ಆರ್ ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕೀಯರ ವಸತಿ ನಿಲಯದ ವಿದ್ಯಾರ್ಥಿನಿಯರಿಂದ ಜಾನಪದ ಸಂಗೀತ ಗಾಯನ ಹಾಗೂ ಗಿರಿಜನ ಉಪಯೋಜನೆಯಡಿ ಕಲಿಕಾ ತರಬೇತಿ ಪಡೆದ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯದ ವಿದ್ಯಾರ್ಥಿನಿಯರಿಂದ ಶಾಸ್ತ್ರೀಯ ನೃತ್ಯ ಪ್ರದರ್ಶನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಕಲಬುರಗಿಯ ಕಲಬುರಗಿ ವಲಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಬಸವರಾಜ ಹೂಗಾರ ಅವರು ಕಾರ್ಯಕ್ರಮ ಉದ್ಘಾಟಿಸುವರು.

ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಚಿದಾನಂದಪ್ಪ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಯಾಗಿ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಽಕಾರಿ ಶಾಷು ಮೋದಿನ್, ತರಬೇತಿ ಗುರುಗಳಾದ ಜಾನಪದ ಗಾಯಕ ಡಿ.ಇಂದ್ರಾಣಿ ಸೇರಿದಂತೆ ಇತರರು ಉಪಸ್ಥಿತರಿ ರುವರು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಅವರು ತಿಳಿಸಿದ್ದಾರೆ.

ಮದ್ಯ, ಮಾದಕ ವಸ್ತುಗಳು ವ್ಯಕ್ತಿಯನ್ನಷ್ಟೇ ಅಲ್ಲ, ಅವನ ಕುಟುಂಬವನ್ನೂ ನಾಶ ಮಾಡುತ್ತದೆ: ಶರಣಪ್ಪ ಸಲಾದಪುರ



ಯಾದಗಿರಿ,ಫೆ.05-

ಮದ್ಯ ಮತ್ತು ಮಾದಕ ವಸ್ತುಗಳು ಇಂದು ವ್ಯಕ್ತಿಯನ್ನಷ್ಟೇ ಅಲ್ಲ, ಅವನ ಕುಟುಂಬವನ್ನೂ, ಸಮಾಜವನ್ನೂ ನಾಶ ಮಾಡುವ ದೊಡ್ಡ ಅಪಾಯವಾಗಿ ಪರಿಣಮಿಸಿವೆ. ಮದ್ಯಪಾನ ಮತ್ತು ಮಾದಕ ವ್ಯಸನದಿಂದ ಆರೋಗ್ಯ ಹದಗೆಡುತ್ತದೆ, ಆರ್ಥಿಕ ಸ್ಥಿತಿ ಕುಸಿಯುತ್ತದೆ, ಕುಟುಂಬದಲ್ಲಿ ಅಶಾಂತಿ ಉಂಟಾಗುತ್ತದೆ ಮತ್ತು ಸಮಾಜದಲ್ಲಿ ಅಪರಾಧಗಳು ಹೆಚ್ಚಾಗುತ್ತವೆ ಎಂದು ಕರ್ನಾಟಕ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷರಾದ ಶರಣಪ್ಪ ಸಲಾದಪುರ ಅವರು ಹೇಳಿದ್ದಾರೆ.

ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ಶಹಾಪುರ ತಾಲ್ಲೂಕು ಪಂಚಾಯಿತಿ, ಗೋಗಿ ಕೆ ಮತ್ತು ಗೋಗಿ ಪೇಟ ಗ್ರಾಮ ಪಂಚಾಯಿತಿಗಳ ಸಹಯೋಗದಲ್ಲಿ ಮದ್ಯ ಮತ್ತು ಮಾದಕ ವಸ್ತುಗಳ ದುಷ್ಪರಿಣಾಮಗಳ ಕುರಿತು ಜನಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಯುವಜನತೆ ಕೆಟ್ಟ ವ್ಯಸನದ ಬಲೆಗೆ ಸಿಲುಕುತ್ತಿರುವುದು ಅತ್ಯಂತ ಆತಂಕ 'ಕಾರಿ ವಿಷಯವಾಗಿದೆ ಎಂದರು.

ಒಮ್ಮೆ ವ್ಯಸನಕ್ಕೆ ಒಳಗಾದರೆ ಅದರಿಂದ ಹೊರಬರುವುದು ಬಹಳ ಕಷ್ಟ. ಆದ್ದರಿಂದ ''ವ್ಯಸನ ಮುಕ್ತ ಜೀವನವೇ ಉತ್ತಮ ಜೀವನ'' ಎಂಬುದನ್ನು ನಾವು ಎಲ್ಲರೂ ಮನಗಂಡು, ನಮ್ಮ ಮಕ್ಕಳನ್ನು, ಯುವಕರನ್ನು ಮತ್ತು ಸಮಾಜವನ್ನು ಈ ದುಷ್ಚಟಗಳಿಂದ ದೂರವಿಡಬೇಕಾಗಿದೆ. ಮನೆಯಲ್ಲಿಯೇ ಉತ್ತಮ ಸಂಸ್ಕಾರ, ಶಾಲೆಗಳಲ್ಲಿ ಜಾಗೃತಿ, ಗ್ರಾಮ ಮಟ್ಟದಲ್ಲಿ ಒಗ್ಗಟ್ಟಿನ ಪ್ರಯತ್ನಗಳು ನಡೆದಾಗ ಮಾತ್ರ ವ್ಯಸನಮುಕ್ತ ಸಮಾಜ ನಿರ್ಮಾಣ ಸಾಧ್ಯ ಎಂದು ಹೇಳಿದರು.

ಕರ್ನಾಟಕ ಮದ್ಯಪಾನ ಸಂಯಮ ಮಂಡಳಿ ರಾಜ್ಯಾದ್ಯಂತ ಮದ್ಯ ಹಾಗೂ ಮಾದಕ ವಸ್ತುಗಳ ವಿರುದ್ಧ ಜನಜಾಗೃತಿ ಮೂಡಿಸುವ ಕಾರ್ಯದಲ್ಲಿ ನಿರಂತರವಾಗಿ ಶ್ರಮಿಸುತ್ತಿದೆ. ಗ್ರಾಮ ಪಂಚಾಯಿಗಳ ಸಹಕಾರದಿಂದ ಈ ರೀತಿಯ ಕಾರ್ಯಕ್ರಮಗಳು ನಡೆದರೆ ಅದರ ಪರಿಣಾಮ ಇನ್ನಷ್ಟು ಬಲವಾಗುತ್ತದೆ. ಜನರು ತಾವೇ ಮುಂದೆ ಬಂದು ಅಕ್ರಮ ಮದ್ಯ, ಮಾದಕ ವಸ್ತುಗಳ ಮಾರಾಟದ ಬಗ್ಗೆ ಮಾಹಿತಿ ನೀಡಬೇಕು ಮತ್ತು ಆಡಳಿತದ ಜೊತೆ ಕೈಜೋಡಿಸಬೇಕು ಎಂದು ಕರೆ ನೀಡಿದರು.

ಮದ್ಯ ಮತ್ತು ಮಾದಕ ವಸ್ತುಗಳ ದುಷ್ಪರಿಣಾಮಗಳ ಬಗ್ಗೆ ವಿದ್ಯಾರ್ಥಿಗಳು, ಯುವಜನರಲ್ಲಿ ಹಾಗೂ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಸಾರಿಗೆ ಸಚಿವರಾದ ರಾಮಲಿಂಗಾರೆಡ್ಡಿ ಅವರನ್ನು ತಿಂಗಳು ಹಿಂದೆಯಷ್ಟೇ ಭೇಟಿ ಮಾಡಲಾಗಿತ್ತು. ತಂಬಾಕು ಜಾಹೀರಾತನ್ನು ಕರ್ನಾಟಕ ಸಾರಿಗೆ ಬಸ್ ಹಾಗೂ ಬಸ್ ನಿಲ್ದಾಣಗಳಲ್ಲಿ ನಿಷೇಧಿಸಲು ಆದೇಶಿಸುವ ಮೂಲಕ ಸಚಿವರು, ನನ್ನ ಮನವಿಗೆ, ಉತ್ತಮ ರೀತಿಯಲ್ಲಿ ಸ್ಪಂದಿಸಿದ್ದಾರೆ ಎಂದು ಶರಣಪ್ಪ ಸಲಾದಪುರ ತಿಳಿಸಿದರು. ಇದೇ ವೇಳೆ, ಆರೋಗ್ಯಕರ ಸಮಾಜ, ಸುರಕ್ಷಿತ ಭವಿಷ್ಯ ಮತ್ತು ಸಂತೋಷಕರ ಜೀವನಕ್ಕಾಗಿ ಮದ್ಯ ಮತ್ತು ಮಾದಕ ವಸ್ತುಗಳನ್ನು ಪ್ರೋತ್ಸಾಹಿಸುವುದಿಲ್ಲ ಹಾಗೂ ಸೇವಿಸುವುದಿಲ್ಲ ಎಂದು ಪ್ರತಿಜ್ಞೆ ಸ್ವೀಕರಿಸಲಾಯಿತು.

ಈ ಕಾರ್ಯಕ್ರಮದಲ್ಲಿ, ಶಹಾಪುರ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಬಸವರಾಜ ಶರಬೈ, ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಶಿವರಾಜ್, ಗ್ರಾಮ ಪಂಚಾಯಿತಿ ಯೋಜನಾ ಅಭಿವೃದ್ಧಿ ಅಧಿಕಾರಿಗಳಾದ ಸಿದ್ಧರಾಮು , ಶಾರದ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರಾದ ಬಸವರಾಜಪ್ಪಗೌಡ ತಂಗಡಿಗಿ, ಬ್ರಹ್ಮಕುಮಾರಿ ಸಂಸ್ಥೆಯ ಪದಾಧಿಕಾರಿ ಬಿ.ಕೆ.ಉಷಾ ಸೇರಿದಂತೆ ಇತರರು ಉಪಸ್ಥಿರಿದ್ದರು.

ಅಕ್ರಮ ದ್ರಾಕ್ಷಿ ಕಂಬಗಳ ಸಾಗಾಟ : 3 ವರ್ಷಗಳ ಜೈಲು

ಗಂಗಾವತಿ,ಫೆ.05-

ತಾಲೂಕಿನ ಆನೆಗೊಂದಿ ಸೀಮಾ ವ್ಯಾಪ್ತಿಯ ಗುಡ್ಡದಲ್ಲಿ ಪರವಾನಿಗೆ ಇಲ್ಲದೆ ಅಕ್ರಮವಾಗಿ ಕಲ್ಲು ಹೊಡೆದು ಸಾಗಾಟ ಮಾಡುತ್ತಿದ್ದ ಆರೋಪಿಗಳಿಗೆ ಪ್ರಧಾನ ಸಿವಿಲ್ ನ್ಯಾಯಾಲಯ 7 ಜನ ಆರೋಪಿಗಳಿಗೆ 3 ವರ್ಷಗಳ ಕಾಲ ಜೈಲು ವಾಸ, ತಲಾ 10 ಸಾವಿರ ದಂಡ ವಿಧಿಸಿ, ಬುಧವಾರ ಆದೇಶ ಹೊರಡಿಸಿದೆ.

ಆನೆಗೊಂದಿ ಸೀಮಾ ವ್ಯಾಪ್ತಿಯಲ್ಲಿ ಬರುವ ಸರಕಾರ ಒಡೆತನದ ಗುಡ್ಡಗಾಡು ಪ್ರದೇಶದಲ್ಲಿ ಅಕ್ರಮವಾಗಿ ದ್ರಾಕ್ಷಿಕಂಬಗಳನ್ನು ಹೊಡೆದು ಸಾಗಾಟ ಮಾಡುತ್ತಿದ್ದ ಸಮಯದಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳು ದಾಳಿಯನ್ನು ನಡೆಸಿ, ನವೆಂಬರ 24,2021 ರಂದು ಗ್ರಾಮೀಣ ಠಾಣೆಯಲ್ಲಿ ದೂರು ನೀಡಿದ್ದರು. ದೂರಿನ ಅನ್ವಯ ಪೊಲೀಸ್ ಇಲಾಖೆಯ ಅಧಿಕಾರಿಗಳು ಆರೋಪಿಗಳ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಕೆ ಮಾಡಿದ್ದು, ವಿಚಾರಣೆಯನ್ನು ನಡೆಸಿ ಪ್ರಧಾನ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರಾದ ನಾಗೇಶ್ ಎಂದು ಆದೇಶ ಹೊರಡಿಸಿದ್ದಾರೆ. ಸರಕಾರದ ಪರವಾಗಿ ಸಹಾಯಕ ಸರಕಾರಿ ಅಭಿಯೋಜಕ ನಿರಂಜನ ಸ್ವಾಮಿ ಹಿರೇಮಠ ಅವರು ವಾದ ಮಂಡಿಸಿದ್ದರು.

ಕರಣಗಿ:ನೀರಿನ ಟ್ಯಾಂಕ್‌ಗೆ ಭೇಟಿ, ಸ್ವಚ್ಛತೆಯ ಪರಿಶೀಲನೆ



ಯಾದಗಿರಿ,ಫೆ.05-

ಯಾದಗಿರಿ ಜಿಲ್ಲೆಯ ಶಹಾಪೂರ ತಾಲ್ಲೂಕಿನ ಚಟ್ನಳ್ಳಿ ಪಂಚಾಯತ್ ಕರಣಗಿ ಗ್ರಾಮದ ನೀರಿನ ಟ್ಯಾಂಕ್ ಭೇಟಿ ನೀಡಿ ಪರಿಶೀಲಿಸಿ ಸ್ವಚ್ಚಗೊಳಿಸಲಾಗಿದೆ ಎಂದು ಶಹಾಪೂರ ಗ್ರಾಮೀಣ ಕುಡಿಯುವ ನೀರು ಮತು ನೈರ್ಮಲ್ಯ ಉಪ-ವಿಭಾಗ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಶಂಕರ ಅವರು ಹೇಳಿದರು.

ಯಾದಗಿರಿ ಜಿಲ್ಲೆಯ ಶಹಾಪೂರ ತಾಲ್ಲೂಕಿನ ಚಟ್ನಳ್ಳಿ ಪಂಚಾಯತ್‌ಯ ಕರಣಗಿ, ಇಬ್ರಾಹಿಂಪೂರ ಪಂಚಾ ಯತ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆಗಳ ಕುರಿತು ಆಲಿಸಿ ಅವರು ಮಾತನಾಡಿದರು.

ಶಹಾಪೂರ ತಾಲ್ಲೂಕಿನ ಚಟ್ನಳ್ಳಿ ಗ್ರಾಮ ಪಂಚಾಯತ್‌ಯ ಕರಣಗಿ ಗ್ರಾಮಕ್ಕೆ ಇನ್ನೂ ಹೆಚ್ಚುವರಿ ಹೊಸ ಟ್ಯಾಂಕ್ ನಿರ್ಮಿಸಲು ಮುಂದಿನ ಯೋಜನೆಯಲ್ಲಿ ಅತೀ ಶೀಘ್ರದಲ್ಲಿ ಕಾಮಗಾರಿ ಕೈಗೊಳ್ಳಲಾಗುವುದು ಎಂದರು.

ಗ್ರಾಮದ ಅರ್ಧ ಭಾಗಕ್ಕೆ ಕುಡಿಯುವ ನೀರು ಸರಬರಾಜು ಹಿನ್ನೆಲೆ ಈ ಗ್ರಾಮದಲ್ಲಿ ಕೆಲವು ಮನೆಗಳಲ್ಲಿ ಅನಧಿಕೃತವಾಗಿ ನೀರಿನ ಮೋಟಾರ್‌ಗಳನ್ನು ಉಪಯೋಗಿಸುತ್ತಿರುವುದರಿಂದ ಹಿಂದಿನ ಮನೆಗಳಿಗೆ ಸಮರ್ಪಕವಾಗಿ ನೀರು ಸರಬರಾಜು ಆಗುತ್ತಿಲ್ಲ ಇದಕ್ಕೆ ಸಂಬಂಧಿಸಿದಂತೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರೊಂದಿಗೆ ಚರ್ಚಿಸಿ ಸೂಕ್ತ ಕ್ರಮಕೈಗೊಳ್ಳಲು ಸೂಚಿಸಿದೆ.

ಶಹಾಪೂರ ತಾಲ್ಲೂಕಿನ ಇಬ್ರಾಹಿಂಪೂರ ಗ್ರಾಮದಲ್ಲಿ ಈಗಾಗಲೇ ಎಸ್.ಡಿ.ಪಿ ಯೋಜನೆಯಡಿ ಓ.ಹೆಚ್.ಟಿ ಟ್ಯಾಂಕ್ ನಿರ್ಮಿಸಲಾಗಿದ್ದು ಜಲಮೂಲ ಸಮಸ್ಯೆಯಿಂದ ಇದಕ್ಕೆ ಸಂಪರ್ಕ ಮಾಡಿರುವುದಿಲ್ಲ. ಈಗ ಜೆ.ಜೆ.ಎಂ ಯೋಜನೆಯಡಿಯಲ್ಲಿ ಸನ್ನತ್ತಿ ಬ್ರಿಡ್ಜ್ ಕಮ್ ಬ್ಯಾರೇಜ್‌ನಿಂದ ಪೈಪ್‌ಲೈನ್ ಅಳವಡಿಸಿ ನೀರಿನ ಸಂಪರ್ಕವನ್ನು ನೀರು ಶುದ್ದೀಕರಣ ಘಟಕಕ್ಕೆ ಸಂಪರ್ಕ ಕಲ್ಪಿಸಲಾಗಿದೆ ಈ ಶುದ್ದೀಕರಣ ಘಟಕದಿಂದ ಓ.ಹೆಚ್.ಟಿ ಟ್ಯಾಂಕಿಗೆ ನೀರನ್ನು ಒದಗಿಸಲು ಕ್ರಮ ಜರುಗಿಸಲಾಗಿದೆ ಎಂದರು. ಈ ಸಂದರ್ಭದಲ್ಲಿ ಕರಣಗಿ ಪಂಚಾಯತ್ ಮಾಜಿ ಸದಸ್ಯರು, ಗ್ರಾಮೀಣ ಕುಡಿಯುವ ನೀರು ಮತು ನೈರ್ಮಲ್ಯ ಇಲಾಖೆ ಸಿಬ್ಬಂದಿ ಗಳು ಹಾಗೂ ಇಬ್ರಾಹಿಂಪೂರ ಸಾರ್ವಜನಿಕರು ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಪ್ರಭಾತಪ್ರೇರಿಯಿಂದ ಧಾರ್ಮಿಕ ವಾತಾವರಣ ನಿರ್ಮಾಣ



ಬಾಗಲಕೋಟೆ,ಫೆ.05-

ಪ್ರಭಾತ ಸಂಚಲನದಿಂದ ಬಾಗಲಕೋಟೆಯಲ್ಲಿ ಧಾರ್ಮಿಕ ವಾತಾವರಣ ನಿರ್ಮಾಣವಾಗಿದ್ದು, ಜನರಲ್ಲಿ ಉತ್ಸಾಹದ ನವ ಚೈತನ್ಯ ತುಂಬಿದೆ ಎಂದು ಚರಂತಿಮಠದ ಪ್ರ'ಭು'ಮ'ಹಾಸ್ವಾಮಿ'ಗ'ಳು' ಹೇಳಿದರು.

ಅವರು ನಗರದ ಟೀಕಿನಮಠದ ಮಲ್ಲಿಕಾರ್ಜುನ ದೇಶಿಕರ ನಿರಂಜನ ಚರಪಟ್ಟಾಧಿಕಾರ ಮಹೋತ್ಸವ ಪ್ರಯುಕ್ತ ನವನಗರದಲ್ಲಿ ಬುಧವಾರ 56-57 ನೇ ಸೆಕ್ಟರ ನಲ್ಲಿ ನಡೆದ 20 ನೇ ದಿನ ಪ್ರಭಾರ ಪೇರಿ(ಪ್ರಭಾತ ಸಂಚಲನ) ಭಾಗವಹಿಸಿ ಮಾತನಾಡನದ ಅವರು ಭಾರತೀಯ ಸಂಸ್ಕೃತಿಯಲ್ಲಿ ಪ್ರಾತ:ಕಾಲ ಪವಿತ್ರವಾಗಿದ್ದು, ಪ್ರಭಾತಪೇರಿ ಪ್ರಭಾತ ಸಂಚನಲಕ್ಕೆ ಬಹಳ ಮಹತ್ವವನ್ನು ಈ ದೇಶ ನೀಡಿದೆ, ಬೆಳಗಿನ ಜಾವ 3-30 ರಿಂದ ಸೂರ್ಯೋದಯವಾಗುವರೆಗೆ ಪ್ರಕೃತಿಯಲ್ಲಿ ಓಜೋನ ಗಾಳಿ ಕೆಲಸ ಮಾಡುತ್ತಿರುತ್ತದೆ, ಆ ಓಜನ ಗಾಳಿ ಮನುಷ್ಯನ ದೇಹಕ್ಕೆ ಸ್ಪರ್ಶವಾಗುವುದರಿಂದ ಶರೀರದಲ್ಲಿ ನವ ಚೈತನ್ಯವನ್ನು ತುಂಬುತ್ತದೆ, ಅದಕ್ಕೆ ಭಾರತೀಯ ಸಂಸ್ಕೃತಿಯಲ್ಲಿ ಬೆಳಗಿನ ಜಾವ ಪೂಜೆ ಪುನಸ್ಕಾರಗಳನ್ನು ಮಾಡುವುವ್ಯವಸ್ಥೆಯನ್ನು ಹಿರಿಯರು ಪಾಲಿಸುತ್ತಾ ಬಂದಿದ್ದಾರೆ, ಇದಕ್ಕೆ ಪ್ರಭಾತ ಎನ್ನುವರು, ಇಂದು ಟೀಕಿನಮಠದ ನೂತನ ಶ್ರೀಗಳ ಪಟ್ಟಾಧಿಕಾರ ಪ್ರಯುಕ್ತ ನಡೆಯುತ್ತಿರುವ ಪ್ರಭಾತಪೇರಿ ಪ್ರಭಾತ ಸಂಚಲನ ಇಡಿ ಬಾಗಲಕೋಟೆ ನಗರವನ್ನೆ ಧಾರ್ಮಿಕ ವಾತಾವರಣವನ್ನು ನಿರ್ಮಸುವುದರ ಜೊತೆಗೆ ಜನರಲ್ಲಿ ಹೊಸ ಶಕ್ತಿಯನ್ನು ತುಂಬಿದೆ ಎಂದರು.

ಗುಳೆದಗುಡ್ಡದ ಒಪ್ಪತ್ತೇಶ್ವರ ಮಹಾಸ್ವಾಮಿಗಳು ಮಾತನಾಡಿ ಪ್ರಭಾತ ಪ್ರೇರಿ ಸಂದರ್ಭದಲ್ಲಿ ನಗರದ ಜನತೆ ಮನೆ ಮುಂದೆ ರಂಗೋಲಿ ಹಾಕಿ, ಬಸವಣ್ಣನವರ ವಚನಗಳನ್ನು ಬರದು, ಯುಗ ಪುರುಷರವೇಷಗಳಿ ಶ್ರೀಗಳನ್ನು ದರಿಸಿದ ಮಕ್ಕಳು, ಹೂಗಳಿಂದ ಪೂಷ್ಪಮಳೆಗೈದು ಆರತಿ ಮಾಡಿ ಗುರವಿಗೆ ಧನ್ಯತಭಾವ ಸರ್ಮಪಿಸಿದ್ದು ಬಾಗಲಕೋಟೆ ಜನತೆಯ ಹೃದಯ ವೈಶಾಲತೆ ದೊಡ್ಡದು ಎಂದರು.

ಪ್ರಭಾತಪೇರಿಯಲ್ಲಿ ಟೀಕಿನ ಮಠದ ಮಲ್ಲಿಕಾರ್ಜುನ ದೇಶಿಕರ ಸ್ವಾಮಿಗಳು, ಅಖಿಲ ಭಾರತ ವೀರ ಶೈವ ಲಿಂಗಾಯತ ಮಹಾಸಭಾದ ಜಿ.ಎನ್.ಪಾಟೀ, ಮಲ್ಲಿಕಾರ್ಜುನ ಸಾಸನೂರ, ಅಶೋಕ ಸಜ್ಜನ ಬೇವೂರ, ಕುಮಾರಸ್ವಾಮಿ ಹಿರೇಮಠ ಚಿತ್ತರಗಿ, ಅನವಾಲದ ಕೈಲಾಸಪತಿಸ್ವಾಮಿಗಳು, ಸಂಗಣ್ಣ ಕಲಾದಗಿ, ಸಂಗಣ್ಣ ಶಿರೂರ, ಎಂ,ಎಸ್,ಮಠ, ಮುರಗೇಪ್ಪ ನಾರಾ, ಬಿ.ಕೆ.ದೇ ಸಾಯಿ, ಬಸವರಾಜ ಕೆಂಗಾಪುರ, ಅಣ್ಣಪ್ಪ ಲೆಂಕೆನ್ನವರ, ಎಸ್.ಎನ್. ಹುರಕಡ್ಲಿ, ಸಿದ್ದಪ್ಪ ಸಜ್ಜನ, ಗುಡಸಲಮನಿ, ಸವಿತಾ ಹುರಕಡ್ಲಿ, ಶರಣು ಹುರಕಡ್ಲಿ, ಸೇರಿದಂತೆ ಅನೇಕರು ಭಾಗವಹಿಸಿದ್ದರು,

ಒಂದನೇಯ ಪುಟದಿಂದ

ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ಮೆರವಣಿಗೆಯಲ್ಲಿ ಕಲೆ, ಸಂಸ್ಕೃತಿ, ಪರಂಪರೆಯ ಮೆಲುಕು

ಹನುಮಂತ ಮಸ್ಕಿ ಅವರಿಂದ ಕೀಲುಕುದುರೆ, ಲಿಂಗರಾಜ ನೀರಮಾನ್ವಿ ಅವರಿಂದ ಡೊಳ್ಳು ಕುಣಿತ, ಶಾಂತರಾಜು ಆಶಾಪೂರ ಅವರಿಂದ ಜಾಂಜ್ ಮೇಳ, ಶಿವರಾಜ ರುದ್ರಾಕ್ಷಿ ದೇವದುರ್ಗ ಅವರಿಂದ ಹಗಲುವೇಷ, ಲಂಕೆಪ್ಪ ಆಮದಿಹಾಳ ಅವರಿಂದ ಕಣಿಹಲಗೆ, ಬಸವರಾಜ ಸಿರವಾರ ಅವರಿಂದ ಡೊಳ್ಳು ಕುಣಿತ, ಪಂಪನಗೌಡ ಸಿಂಧನೂರು ಅವರಿಂದ ತಾಷಾರಾಂಡೋಲು, ಚಿನ್ನಪ್ಪ ಸಿಂಧನೂರು ಅವರಿಂದ ಹಗಲುವೇಷ, ಗದ್ದೆಪ್ಪ ಭಜಂತ್ರಿ ಆಮದಿಹಾಳ ಅವರಿಂದ ಶಹನಾಯಿ ವಾದನ, ತಮ್ಮಣ್ಣ ರಾಠೋಡ ದೇವದುರ್ಗ ಅವರಿಂದ ಲಂಬಾಣಿ ನೃತ್ಯ, ನಾಗೇಶ ಬೆಂಗಳೂರು ಅವರಿಂದ ಕೊಂಬುಕಹಳೆ, ಹನುಮಂತ್ರಾಯ ಅವರಿಂದ ಗೊರವ ಕುಣಿತ, ಮಾರೆಪ್ಪ ಆತಕೂರ ಅವರಿಂದ ತಮಟೆವಾದನ, ಹಣಮಂತ್ರ ಭಜಂತ್ರಿ ಅವರಿಂದ ನಾಸಿಕಡೊಳ್ಳು, ಮಹೇಶ ಕವಿತಾಳ ಅವರಿಂದ ಹಗಲುವೇಷ, ನೀಲಕಂಠ ಕಲಬುರಗಿ ಅವರಿಂದ ಗೊಂಬೆ ಕುಣಿತ, ತಿಪ್ಪೇಸ್ವಾಮಿ ಚಿತ್ರದುರ್ಗ ಅವರಿಂದ ಮಹಿಳಾ ಡೊಳ್ಳು, ಶ್ರೀಕಾಂತ ದಕ್ಷಿಣ ಕನ್ನಡ ಅವರಿಂದ ಕಂಗೀಲು ಕುಣಿತ, ಕೆ ವಸಂತಕುಮಾರ ಬಳ್ಳಾರಿ ಅವರಿಂದ ಕಹಳೆವಾದನ, ಮಹಾಂತೇಶ ಚಿತ್ರದುರ್ಗ ಅವರಿಂದ ಸೋಮನಕುಣಿತ, ಸಿ ವೀರೇಶ ವಿಜಯನಗರ ಅವರಿಂದ ನಂದಿಧ್ವಜ ಮತ್ತು ಸಮಾಳ, ವೀರಯ್ಯ ಹಿರೇಮಠ ಕೊಪ್ಪಳ ಅವರಿಂದ ಭದ್ರಕಾಳಿ ಕುಣಿತ, ಮೀನಾಕ್ಷಮ್ಮ ದಾವಣಗೆರೆ ಅವರಿಂದ ಮಹಿಳಾ ವೀರಗಾಸೆ, ಕಲ್ಲಪ್ಪ ಹಂಚಿನಮನಿ ಧರವಾಡ ಅವರಿಂದ ಜಗ್ಗಲಗಿ, ಶ್ರೀನಿವಾಸ ದಾವಣಗೆರೆ ಕೋಳಿಕುಣಿತ, ಮಹಾಂತೇಶ ವಾಲಿ ಕೊಣ್ಣೂರ ಕರಡಿಮಜಲು, ಮಲ್ಲಿಕಾರ್ಜುನ ಕೊಪ್ಪದ ಅವರಿಂದ ಡೊಳ್ಳುಕುಣಿತ ಕಲಾ ಪ್ರಕಾರಗಳ ಪ್ರದರ್ಶನವು ಆಕರ್ಷಣೀಯವಾಗಿ ನಡೆದು ಸಾರ್ವಜನಿಕರ ಗಮನ ಸೆಳೆದವು.

ರಾಯಚೂರು ಜಿಲ್ಲಾ ಉತ್ಸವ ಬಾಯಲ್ಲಿ ನೀರೂರಿಸುವ ಆಹಾರ ಮೇಳ : ವಿವಿಧ ಬಗೆಯ ತಿನಿಸುಗಳಿಗೆ ಮುಗಿಬಿದ್ದ ಜನ

ಅನುಷ್ಠಾನ ಪ್ರಾದಿಕಾರ ಅಧ್ಯಕ್ಷ ಪಾಮಯ್ಯ ಮುರಾರಿ, ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ರಾಜಶೇಖರ ರಾಮಸ್ವಾಮಿ, ಜಿಲ್ಲಾಧಿಕಾರಿ ನಿತೀಶ್ ಕೆ., ಜಿ.ಪಂ. ಸಿಇಒ ಈಶ್ವರ ಕುಮಾರ್ ಕಾಂದು, ಎಸ್‌ಪಿ ಅರುಣಾಂಗ್ಷು ಗಿರಿ, ಕೃಷಿ ವಿವಿ ಕುಲಪತಿ ಡಾ. ಎಂ. ಹನುಮಂತಪ್ಪ, ಮಹಾನಗರಪಾಲಿಕೆ ಆಯುಕ್ತ ಜುಬಿನ್, ಮಹಾಪಾತ್ರ, ಎಪಿಎಂಸಿ ಅಧ್ಯಕ್ಷ ಮಲ್ಲಿಕಾರ್ಜುನ ಗೌಡ, ಉಪಾಧ್ಯಕ್ಷ ಬಶೀರ್ ಅಹ್ಮದ್ ಸೇರಿದಂತೆ ಹಲವು ಗಣ್ಯರು ಈ ವೇಳೆ ಉಪಸ್ಥಿತರಿದ್ದು, ವಿವಿಧ ಬಗೆಯ ಆಹಾರ, ತಿಂಡಿ ತಿನಿಸು ಗಳ ಸವಿಯನ್ನು ಸವಿದರು.

ಆಹಾರ ಮೇಳದಲ್ಲಿ ಚಿಕ್ಕಮಗಳೂರು, ಗದಗ, ಮೈಸೂರು, ಬಾಗಲಕೋಟೆ, ಬೆಳಗಾವಿ, ಕಲಬುರ್ಗಿ ಸೇರಿದಂತೆ ಹಲವು ಜಿಲ್ಲೆಗಳಿಂದ ಆಗಮಿಸಿದ್ದ ಹಲವು ಬಗೆಯ ತಿಂಡಿ, ಖಾದ್ಯಗಳ ತಯಾರಕರು, ಮಳಿಗೆಯಲ್ಲಿ ತಮ್ಮ ತಿಂಡಿ ತಿನಿಸುಗಳನ್ನು ಇಲ್ಲಿ ಪರಿಚಯಿಸಿದ್ದಲ್ಲದೆ, ಜನರಿಗೆ ಸವಿಯಲೂ ನೀಡಿದರು. ಉತ್ಸವ ಆರಂಭಗೊಂಡ ಮೊದಲ ದಿನವೇ ಬೆಳಿಗ್ಗೆಯಿಂದಲೇ ಆಹಾರ ಮೇಳಕ್ಕೆ ಸಾಗರೋಪಾದಿ ಹರಿದುಬಂದ ಜನ ವಿವಿಧ ಬಗೆಯ ತಿನಿಸುಗಳನ್ನು ಸವಿದರು. ರಾಯಚೂರು ಜಿಲ್ಲೆಯೂ ಸೇರಿದಂತೆ ಅಕ್ಕಪಕ್ಕದ ಜಿಲ್ಲೆ, ತಾಲ್ಲೂಕುಗಳ ಜನರು ಕೂಡ ರಾಯಚೂರು ಉತ್ಸವವನ್ನು ಕಣ್ಣಾರೆ ಕಂಡು ಸಂಭ್ರಮಿಸಲು ಆಗಮಿಸುತ್ತಿದ್ದುದು ಕಂಡುಬಂದಿತು. ಹಲವು ಶಾಲೆಗಳ ಮಕ್ಕಳು ಕೂಡ ಉತ್ಸವದ ಸವಿ ಸವಿಯಲು ತಮ್ಮ ಶಾಲಾ ಶಿಕ್ಷಕರುಗಳೊಂದಿಗೆ ಆಹಾರ ಮೇಳಕ್ಕೂ ಭೇಟಿ ನೀಡಿ, ತಮಗಿಷ್ಟವಾದ ತಿಂಡಿ ತಿನಿಸುಗಳನ್ನು ಸವಿದರು.

ಆಹಾರ ಮೇಳದಲ್ಲಿ ಫಾಸ್ಟ್ ಫುಡ್ ತಿನಿಸುಗಳಿಂದ ಮೊದಲುಗೊಂಡು, ವಿವಿಧ ಬಗೆಯ ಹಣ್ಣುಗಳ ಜ್ಯೂಸ್ ಅಂಗಡಿಗಳು, ಮಂಡಾಳು ಒಗ್ಗರಣಿ, ಮಿರ್ಚಿ ಬಜ್ಜಿ, ಬದನೆಕಾಯಿ ಬಜ್ಜಿ, ಪಾಪ್ ಕಾರ್ನ್, ಗೋಬಿ ಮಂಚೂರಿ, ನೂಡಲ್ಸ್ , ಆಂಧ್ರಾ ಸ್ವೀಟ್ಸ್ , ನಾನಾ ಬಗೆಯ ಹಪ್ಪಳ, ಸಂಡಿಗೆ ಸೇರಿದಂತೆ ನಾಡಿನ ನಾನಾ ಭಾಗದಲ್ಲಿನ ತಿಂಡಿ ತಿನಿಸುಗಳು ಒಂದೇ ಸೂರಿನಡಿ ಜನರಿಗೆ ಲಭ್ಯವಾಗುವಂತೆ ಆಹಾರ ಮೇಳದಲ್ಲಿ ವ್ಯವಸ್ಥೆ ಗೊಳಿಸಲಾಗಿತ್ತು.

ಆಹಾರ ಮೇಳದ ಮೊದಲ ದಿನವೇ ತಿಂಡಿ ತಿನಿಸುಗಳ ಮಳಿಗೆಗಳಲ್ಲಿ ಭರ್ಜರಿ ಸ್ಪಂದನೆ ದೊರೆತಿದ್ದು, ಒಳ್ಳೆಯ ವ್ಯಾಪಾರವಾಗಿದ್ದು ಕಂಡುಬಂದಿತು. ಉತ್ಸವ ಫೆ. 07 ರವರೆಗೂ ನಡೆಯಲಿದ್ದು, ಆಹಾರ ಮೇಳದಲ್ಲಿ ತಿಂಡಿ ತಿನಿಸುಗಳ ವ್ಯಾಪಾರಸ್ಥರಿಗೆ ಭರ್ಜರಿ ವ್ಯಾಪಾರವಾಗಿ, ಉತ್ತಮ ಲಾಭ ಕಂಡುಕೊಳ್ಳುವ ನಿರೀಕ್ಷೆ ಇದೆ.

ಕಾವ್ಯವು ಮಾನವೀಯ ಮೌಲ್ಯ ಮತ್ತು ಸೌಹಾರ್ದತೆಯನ್ನು ಬೆಳೆಸುವ ಬಲಿಷ್ಠ ಅಸ್ತ್ರವಾಗಿದೆ - ರಂಗಣ್ಣ ಪಾಟೀಲ್ ಅಳ್ಳುಂಡಿ

ಕವಿ ಗೋಷ್ಠಿಗಳನ್ನು ಆಯೋಜಿಸುವ ಮೂಲಕ ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸಲಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು ಕೂಡ ಜಿಲ್ಲಾಡಳಿತದ ಸಹಕಾರದೊಂದಿಗೆ ಕವಿಗಳಿಗೆ ಪ್ರೋತ್ಸಾಹ ನೀಡುತ್ತಾ ಪೂರಕವಾಗಿ ನಿಂತಿದೆ. ಈ ಕವಿ ಗೋಷ್ಠಿಯಲ್ಲಿ ಸುಮಾರು 75 ಕವಿಗಳು ತಮ್ಮ ಕಾವ್ಯ ವಾಚನ ಮಾಡುವ ಮೂಲಕ ಎಡೆದೊರೆ ನಾಡು ರಾಯಚೂರು ಉತ್ಸವ ಸಾಹಿತ್ಯಿಕವಾಗಿ ಮತ್ತೊಂದು ಎತ್ತರವನ್ನು ತಲುಪಿಸುವ ಕಾರ್ಯ ಮಾಡಿದರು.

ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರು ಹಾಗೂ ಕವಿ ಅನುವಾದಕರಾದ ಚಿದಾನಂದ ಸಾಲಿ ಅವರು ಕಾರ್ಯಕ್ರಮದ ಕುರಿತು ಮಾತನಾಡಿ, ಗದ್ಯದಲ್ಲಿ ಬರೆದಿದ್ದನ್ನು, ಕತ್ತರಿಸಿ, ಪದಗಳನ್ನು ಜೋಡಿಸುತ್ತಾ ಹೋದರೆ ಅದು ಕವಿತೆ ಆಗುತ್ತದೆ ಎಂಬ ತಪ್ಪು ಗ್ರಹಿಕೆ ಕೆಲವರಲ್ಲಿದೆ. ಆದರೆ, ಗದ್ಯಕ್ಕೂ ಪದ್ಯಕ್ಕೂ ಇರುವ ಮುಖ್ಯ ವ್ಯತ್ಯಾಸವೆ ಕಾವ್ಯದ ಗುಣವಾಗಿದೆ. ಒಂದು ದೊಡ್ಡ ಜೀವನ ತತ್ವವನ್ನು ಸರಳವಾದ ಸಾಲುಗಳಲ್ಲಿ ಹೇಳುವವನೆ ನೀಜವಾದ ಕವಿ. ಅತ್ಯಂತ ಸಂಕೀರ್ಣ ಭಾಷೆ ಬಳಸಿ, ತಾನು ಹೇಳಬೇಕೆಂದುಕೊಂಡಿದ್ದನ್ನು ಕೇಳುವವರಿಗೆ ಕವನಗಳ ಮೂಲಕ ಹೇಳುವವನೆ ಕವಿ. ಜನ ಸಮೂಹದ ಧ್ವನಿ ಅಂತಲೂ ಕವಿಯನ್ನು ಕರೆಯುತ್ತಾರೆ. ಕವಿ, ಕವಿತೆಯ ಮೂಲಕ ಜನರ ಸಮಸ್ಯೆಗಳಿಗೆ ಧ್ವನಿಯಾಗುತ್ತಾನೆ. ಅದಕ್ಕಾಗಿ ಕವಿಯನ್ನು ಸಮಾಜದ ಅಘೋಷಿತ ಶಾಸಕ ಅಂತಲೂ ಕರೆಯಲಾಗುತ್ತದೆ. ಜನ ಸಮೂಹದ ಸಮಸ್ಯೆಗಳಿಗೆ, ಜನರ ಸಂಕಟಗಳಿಗೆ ಕನ್ನಡಿ ಹಿಡಿಯುವಂತಹ ಕೆಲಸ ಕವಿ ಮಾಡುತ್ತಾನೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಲಿಂಗಸುಗೂರಿನ ಸಾಹಿತಿಗಳಾದ ಗಿರಿರಾಜ ಹೊಸಮನಿ ಅವರು ಮಾತನಾಡಿದರು.

ಕವಿಗಳಾದ ಪಂಪಾಪತಿ ಶಾಸ್ತ್ರೀ, ಮಲ್ಲಣ್ಣ ಹರವಾಳ, ಮಹಾದೇವ ಎಸ್. ಪಾಟೀಲ್, ಖಾನ್ ಸಾಬ್ ಮೋಮಿನ್, ಜೆ.ಎಂ.ಶರಣಯ್ಯ ಸ್ವಾಮಿ, ಡಾ.ಹುಸೇನಪ್ಪ ಅಮರಾಪುರ, ಡಾ.ಸತೀಶ್ ಕುಮಾರ್ ಎಸ್., ಅನಿಲರಾಜ್ ಜೆ., ಮಹಾಂತೇಶ ಹೀರಾ, ಕೆ. ಸತ್ಯನಾರಾಯಣ, ಬಶೀರ್ ಅಹ್ಮದ್ ಹೊಸಮನಿ, ಡಾ.ವೆಂಕಟೇಶ ನವಲಿ, ಡಾ.ಎಸ್.ಜಿ.ಪಾಟೀಲ, ಅಮರಗುಂಡಪ್ಪ ಹೂಗಾರ, ದೇವರಾಜ್ ಎಸ್. ಬಪ್ಪೂರ, ಮುಜೀಬ್ ಮಾನ್ವಿ, ಚಂದ್ರಶೇಖರ ನಾಡಗೌಡ, ಡಾ.ಶಾಮಸುಂದರ ಪಟವಾರಿ, ಎಂ.ರಾಮಚಂದ್ರರಾವ್, ದೇವನಪಲ್ಲಿ ಶ್ರೀನಿವಾಸ್, ದುರುಗಪ್ಪ ಗುಡದೂರು, ಬಸವರಾಜ ಜಂಗಮರಹಳ್ಳಿ, ರುದ್ರಪ್ಪ ಎಸ್ ತಳವಾರ, ವೆಂಕಟೇಶ ಗುಡೂರ, ಶಿಕ್ಷಕ ಮಹೇಶ, ಮಲ್ಲಿಕಾರ್ಜುನ ನಾಯಕ, ಲಕ್ಷ್ಮಣ ಬಾರಿಕೇರ, ಮುರಳೀಕೃಷ್ಣ, ದೇವೇಂದ್ರ ಹುಡಾ, ಮಹಾಂತೇಶ ಗವಿಗಟ್ಟ, ಎಸ್.ಶಿವಮೂರ್ತಿ, ಗೋಪಿನಾಥ ದೇಸಾಯಿ, ಪ್ರಸನ್ನ ಪಟವಾರಿ, ಮುರುಗೇಶ ಕುಂಬಾರ, ಪಿ.ವೆಂಕಟೇಶ ಬಾಗಲವಾಡ, ಶ್ರೀಧರರಾವ್ ದೇಸಾಯಿ, ಸಣ್ಣ ಯಲ್ಲಪ್ಪ, ಮಂಜುನಾಥ ಗುತ್ತೇದಾರ, ರಾಘವೇಂದ್ರ ವಿ.ಹೆಚ್., ರಘುನಾಥರೆಡ್ಡಿ ಮನ್ನಲಾಪುರ, ಶಂಕರರಾವ್ ಉಭಾಳೆ, ಡಾ.ತಿಮ್ಮಯ್ಯ ಶೆಟ್ಟಿ ಇಲ್ಲೂರ, ಸಿದ್ದಣ್ಣ ನಿಲೋಗಿ, ಸಿದ್ಧಾರ್ಥ ವಲ್ಲಭ, ಮಹಾಂತಸ್ವಾಮಿ ಉಪ್ರಾಳ, ನೀಲಕಂಠಯ್ಯ ಮಳಿಮಠ ಗಲಗ, ಇಮಾಮುದ್ದೀನ್ ಮಾಡಗಿರಿ, ಕೆ.ಮಲ್ಲಿಕಾರ್ಜುನ ಕವಿತಾಳ, ಜಿ.ಶರಣ ಬಸವರಾಜ್, ಶರಣಪ್ಪ ಗಬ್ಬೂರು, ವೀರೇಶ್ ಗೋನವಾರ, ಚಂದ್ರಶೇಖರ ಮದ್ದಾಪುರ, ಮಹಾದೇವ ಹಳ್ಳಿ, ಶಿವಪ್ಪ ಪಾಟೀಲ ಜಾನೇಕಲ್, ಮಂಜುನಾಥ ಸಾಹುಕಾರಮನಿ, ಸಿ.ಹನುಮಂತರಾಯ ಹಾಗೂ ಮತ್ತಿತರರು ಈ ಕವಿಗೋಷ್ಠಿಯಲ್ಲಿ ಪಾಲ್ಗೊಂಡು ಕವನ ವಾಚನ ಮಾಡಿದರು.

ಕಾರ್ಯಕ್ರಮದಲ್ಲಿ ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಈರಣ್ಣ ಬಿರಾದಾರ, ಹಿರಿಯ ಸಾಹಿತಿಗಳಾದ ಬಿ.ಜಿ ಹುಲಿ, ರಾಯಚೂರು ತಾಲ್ಲೂಕು ಕಸಾಪ ಅಧ್ಯಕ್ಷರಾದ ಡಾ. ಬಿ.ವಿಜಯರಾಜೇಂದ್ರ, ಸಿಂಧನೂರು ತಾಲ್ಲೂಕು ಕಸಾಪ ಅಧ್ಯಕ್ಷರಾದ ಹೆಚ್.ಎಫ್. ಮಸ್ಕಿ, ಚುನಾವಣಾ ವಿಭಾಗದ ತಹಶಿಲ್ದಾರ ಪರಶುರಾಮ ಸೇರಿದಂತೆ ಕವಿಗಳು, ಕವನ ಆಸಕ್ತರು, ಸಾರ್ವಜನಿಕರು, ವಿದ್ಯಾರ್ಥಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಅಣ್ಣಪ್ಪ ಮೇಟಿಗೌಡ ಕಾರ್ಯಕ್ರಮದ ನಿರೂಪಿಸಿದರು. ರಾವುತ್‌ರಾವ್ ಬರೂರ ಸ್ವಾಗತಿಸಿದರು. ನಾಗಪ್ಪ ಹೊರಪ್ಯಾಟಿ ಕಾರ್ಯಕ್ರಮ ನಿರ್ವಹಣೆ ಮಾಡಿದರೆ, ವಿಜಯಲಕ್ಷ್ಮಿ ಅಸ್ಕಿಹಾಳ ಅವರು ಕೊನೆಯಲ್ಲಿ ವಂದಿಸಿದರು.

ರೈತೋಪಯೋಗಿ ಕೃಷಿ ಮೇಳಕ್ಕೆ ರೈತರ ಅಭೂತಪೂವ ಸ್ಪಂದನೆ

ಕೀಟನಾಶಕಗಳು, ಅತ್ಯಾಧುನಿಕ ಕೃಷಿ ಯಂತ್ರೋಪಕರಣಗಳನ್ನು ಕೃಷಿ ಮೇಳದಲ್ಲಿ ರೈತರಿಗೆ ಪರಿಚಯಿಸುವ ಕಾರ್ಯ ನಡೆದಿದೆ.

ವಾಲ್ಮೀಕಿ ಅಭಿವೃದ್ಧಿ ನಿಗಮ ಅಧ್ಯಕ್ಷ ಬಸನಗೌಡ ದದ್ದಲ್, ರಾಯಚೂರು ನಗರ ಶಾಸಕ ಡಾ. ಶಿವರಾಜ ಪಾಟೀಲ್, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾದಿಕಾರ ಅಧ್ಯಕ್ಷ ಪಾಮಯ್ಯ ಮುರಾರಿ, ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ರಾಜಶೇಖರ ರಾಮಸ್ವಾಮಿ, ಜಿಲ್ಲಾಧಿಕಾರಿ ನಿತೀಶ್ ಕೆ., ಜಿ.ಪಂ. ಸಿಇಒ ಈಶ್ವರ ಕುಮಾರ್ ಕಾಂದು, ಎಸ್‌ಪಿ ಅರುಣಾಂಗ್ಷು ಗಿರಿ, ಕೃಷಿ ವಿವಿ ಕುಲಪತಿ ಡಾ. ಎಂ. ಹನುಮಂತಪ್ಪ, ಮಹಾನಗರಪಾಲಿಕೆ ಆಯುಕ್ತ ಜುಬಿನ್, ಮಹಾಪಾತ್ರ, ಎಪಿಎಂಸಿ ಅಧ್ಯಕ್ಷ ಮಲ್ಲಿಕಾರ್ಜುನ ಗೌಡ, ಉಪಾಧ್ಯಕ್ಷ ಬಶೀರ್ ಅಹ್ಮದ್ ಸೇರಿದಂತೆ ಹಲವು ಗಣ್ಯರು ಈ ವೇಳೆ ಉಪಸ್ಥಿತರಿದ್ದರು.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ಬೆಂಬಲ ಬೆಲೆ ಯೋಜನೆಯಡಿ ಕಡಲೆ ಕಾಳು ಉತ್ಪನ್ನ ಖರೀದಿಗೆ ಕೇಂದ್ರ ಆರಂಭ

ಬಳ್ಳಾರಿ,ಫೆ.05-

2025-26ನೇ ಸಾಲಿನ ಬೆಂಬಲ ಬೆಲೆ ಯೋಜನೆಯಡಿ ಬಳ್ಳಾರಿ ಜಿಲ್ಲೆಯಲ್ಲಿ ಹಿಂಗಾರು ಹಂಗಾಮಿನ ಎಫ್.ಎ.ಕ್ಯೂ ಗುಣಮಟ್ಟದ ಕಡಲೆಕಾಳು ಉತ್ಪನ್ನವನ್ನು ಕೇಂದ್ರ ಸರ್ಕಾರ ನಿಗಧಿಪಡಿಸಿದ ಬೆಂಬಲ ಬೆಲೆ ಪ್ರತಿ ಕ್ವಿಂಟಾಲ್ ಗೆ ರೂ.5875 ರಂತೆ ರಾಜ್ಯ ಸರ್ಕಾರದ ವತಿಯಿಂದ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿಯಮಿತ, ಬೆಂಗ ಳೂರು, ಬಳ್ಳಾರಿ ಶಾಖೆ ಇವರ ಮೂಲಕ ರೈತರಿಂದ ಖರೀದಿಸಲು ನೋಂದಣಿ ಮತ್ತು ಖರೀದಿ ಕೇಂದ್ರಗಳನ್ನು ಆರಂಭಿಸಲಾಗಿದೆ.

ಖರೀದಿ ಕೇಂದ್ರಗಳ ವಿವರ: ಬಳ್ಳಾರಿ ನಗರದ ಮಾರುತಿ ನಗರದ 2ನೇ ಕ್ರಾಸ್ ನ ಎಸ್.ಪಿ ವೃತ್ತ ಹತ್ತಿರದ ರೈತರ ಸೇವಾ ಸಹಕಾರ ಸಂಘ ನಿಯಮಿತ (ಮೊ.9535380789) ಮತ್ತು ಸಿರುಗುಪ್ಪ ಪಟ್ಟಣದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ-1(ಮೊ.9845166601). ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿಯಮಿತ, ಬೆಂಗ ಳೂರು, ಬಳ್ಳಾರಿ ಮೊ.944966 4453.

ಬೇಕಾದ ಅಗತ್ಯ ದಾಖಲೆ: 2025-26ನೇ ಸಾಲಿನ ಪಹಣಿ ಪತ್ರ, ಆಧಾರ್ ಕಾರ್ಡ್ (ಮೂಲ), ಬ್ಯಾಂಕ್ ಖಾತೆ (ಆಧಾರ್ ಕಾರ್ಡ್‌ಗೆ ಜೋಡಣೆಗೊಂಡ) ಪುಸ್ತಕದ ನಕಲು ಪ್ರತಿ, ರೈತರು ತಮ್ಮ ಹೆಸರನ್ನು ಫ್ರೂಟ್ಸ್ ತಂತ್ರಾಂಶದಲ್ಲಿ ನೋಂದಾಯಿಸಿರ ಬೇಕು ಹಾಗೂ ಎಫ್‌ಐಡಿ ಪಡೆಯು ವುದು ಕಡ್ಡಾಯ. ರೈತರಲ್ಲಿ ಫ್ರೂಟ್ಸ್ ಐಡಿ ಇಲ್ಲದೇ ಇದ್ದಲ್ಲಿ ಅಥವಾ ಫ್ರೂಟ್ಸ್ ನಲ್ಲಿ ಯಾವು ದಾದರು ತಾಂತ್ರಿಕ ದೋಷವಿದ್ದಲ್ಲಿ ರೈತರು ಕೃಷಿ ಇಲಾಖೆಯನ್ನು ಸಂಪ ರ್ಕಿಸಿ ಅವಶ್ಯಕ ಮಾಹಿತಿ ಪಡೆಯಲು ತಿಳಿಸಿದೆ.

ಕಡಲೆಕಾಳು ಖರೀದಿ ಕೇಂದ್ರ ಗಳಲ್ಲಿ ರೈತರು ತಮ್ಮ ಹೆಸರನ್ನು ಜ.29 ರಿಂದ ರಿಂದ 80 ದಿನಗಳೊಳಗೆ ನೋಂದಣಿ ಮಾಡಿಸತಕ್ಕದ್ದು, ಹಾಗೂ ನೋಂದಣಿ ಚೀಟಿ ಪಡೆಯುವುದು. ಒಣಗಿದ ಹಾಗೂ ಸ್ವಚ್ಛ ಎಫ್.ಎ.ಕ್ಯೂ ಗುಣಮಟ್ಟದ ಕಡಲೆ ಉತ್ಪನ್ನವನ್ನು ಮಾರಾಟಕ್ಕಾಗಿ ಖರೀದಿ ಕೇಂದ್ರಕ್ಕೆ ತರುವುದು.

ನಿಗಧಿತ ಅವಧಿಯೊಳಗೆ ನೋಂದಣಿಗೊಂಡ ರೈತರಿಂದ ಪ್ರತಿ ಎಕರೆಗೆ 04 (ನಾಲ್ಕು) ಕ್ವಿಂಟಾಲ್ ನಂತೆ ಪ್ರತಿ ರೈತರಿಂದ ಗರಿಷ್ಠ 40 ಕ್ವಿಂಟಾಲ್ ಪ್ರಮಾಣದಷ್ಟು ಕಡಲೆಕಾಳು ಉತ್ಪನ್ನವನ್ನು 90 ದಿನಗಳವರೆಗೆ ಖರೀದಿಸಲಾಗುವುದು. ಸರ್ಕಾರಿ ರಜೆ ದಿನಗಳನ್ನು ಹೊರತುಪಡಿಸಿ ಉಳಿದ ದಿನಗಳಲ್ಲಿ ಖರೀದಿಸಲಾಗುವುದು.

ಜಿಲ್ಲೆಯ ರೈತರು ಬೆಂಬಲಬೆಲೆ ಯೋಜನೆಯನ್ನು ಸದುಪಯೋಗ ಪಡೆದುಕೊಳ್ಳಲು ಕೋರಿದೆ. ಯಾವುದೇ ಸಂದರ್ಭದಲ್ಲಿ ರೈತರು ಮಧ್ಯವರ್ತಿಗಳ ಮೊರೆ ಹೋಗಬಾರದು. ಇದರ ಸದುಪಯೋಗವನ್ನು ರೈತರೇ ನೇರವಾಗಿ ಪಡೆದುಕೊಳ್ಳಬೇಕು ಎಂದು ಕೃಷಿ ಮಾರಾಟ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆಂಭಾವಿ ಪಟ್ಟಣದಲ್ಲಿ ಧರ್ಮ ಜಾಗೃತಿಯ ಕಾರ್ಯ

ಕೆಂಭಾವಿ,ಫೆ.05-

ಉತ್ತರಾದಿ ಮಠಾಧೀಶರಾದ ಶ್ರೀ ಸತ್ಯಾತ್ಮತೀರ್ಥರ ಪೂರ್ಣಾನುಗ್ರಹದಿಂದ ನಮ್ಮ ಕೆಂಭಾವಿ ಪಟ್ಟಣದಲ್ಲಿ ಧರ್ಮ ಜಾಗೃತಿಯ ಹಲವು ಕಾರ್ಯಗಳು ನಡೆಯುತ್ತಿವೆ ಎಂದು ಜಯಸತ್ಯಪ್ರಮೋದ ಸೇವಾ ಸಂಘದ ಅಧ್ಯಕ್ಷ ವಾಮನರಾವ ದೇಶಪಾಂಡೆ ಹೇಳಿದರು.

ಪಟ್ಟಣದ ಉತ್ತರಾದಿ ಮಠದ ನೂತನ ಕಟ್ಟಡ ಮತ್ತು ಯತಿ ಚತುಷ್ಟಯ ವೃಂದಾವನ ಸ್ಥಾಪನೆಗೊಂಡು ಒಂದು ವರ್ಷವಾದ ಹಿನ್ನೆಲೆಯಲ್ಲಿ ಬುಧವಾರ ಶ್ರೀ ಮಠದಲ್ಲಿ ಏರ್ಪಡಿಸಿದ್ದ ವರ್ಧಂತಿ ಮಹೋತ್ಸವದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ದೇಶದೆಲ್ಲೆಡೆ ರಾಮನಾಮ ಜಪ ಹೇಳುವ ಮೂಲಕ ದೇಶದ ಸಂಸ್ಕೃತಿ ರಕ್ಷಣೆ ಮತ್ತು ಶ್ರೀರಾಮನ ಆದರ್ಶ ಗುಣಗಳನ್ನು ಭಕ್ತ ಜನರಿಗೆ ತಿಳಿಸುವ ಉದ್ದೇಶದಿಂದ ಕೋಟಿ ರಾಮನಾಮ ಜಪ ಯಜ್ಞ ಹಮ್ಮಿಕೊಂಡಿದ್ದಾರೆ. ಈ ಮಹಾನ ಕಾರ್ಯಕ್ಕೆ ನಾವೆಲ್ಲರೂ ಶ್ರೀಗಳ ಜೊತೆ ಕೈಜೋಡಿಸಿ ಅವರು ಬೋಧನೆ ಮಾಡಿದ ರಾಮನಾಮ ಶಬ್ದವನ್ನು ನಿತ್ಯ ಜಪ ಮಾಡೋಣ ಎಂದು ಹೇಳಿದರು.

ವರ್ಧಂತಿ ಮಹೋತ್ಸವದ ನಿಮಿತ್ಯ ಶ್ರೀಮಠದಲ್ಲಿ ಬೆಳಿಗ್ಗೆ ಅರ್ಚಕ ರಾಘವೇಂದ್ರಾಚಾರ್ಯ ಜೋಷಿ ನೇತೃತ್ವದಲ್ಲಿ ಶ್ರೀ ಸತ್ಯನಾರಾಯಣ, ಶ್ರೀ ಸುಮಧ್ವಮಾರುತಿ ಹಾಗೂ ಯತಿಚತುಷ್ಟಯ ವೃಂದಾವನಕ್ಕೆ ವಿಷ್ಣುಸಹಸ್ರನಾಮ, ವಾಯುಸ್ತುತಿ, ಸುಂದರಕಾಂಡ, ಸುಮಧ್ವವಿಜಯ ಪಾರಾಯಣ, ಅಷ್ಟೋತ್ತರ, ಅಭಿಷೇಕ, ಅಲಂಕಾರ, ರಥೋತ್ಸವ, ಭಜನೆ ಸೇರಿದಂತೆ ಹಲವು ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ಮಧ್ಯಾಹ್ನ ತೀರ್ಥಪ್ರಸಾದ ನಡೆಯಿತು. ಜಯಸತ್ಯಪ್ರಮೋ ದಸೇವಾ ಸಂಘದ ಉಪಾಧ್ಯಕ್ಷ ಬಾಳಕೃಷ್ಣರಾವ ಕುಲಕರ್ಣಿ, ಕಾರ್ಯದರ್ಶಿ ತಿರುಮ ಲಾಚಾರ್ಯಜೋಷಿ, ಮೋಹನ ರಾವ ಕುಲಕರ್ಣಿ, ಹಣಮಂತರಾಶವ ಕುಲಕರ್ಣಿ, ನರಸಿಂಹರಾವ ಕುಲ ಕರ್ಣಿ, ಸಂಜೀವರಾವ ಕುಲಕರ್ಣಿ, ವೆಂಕಟೇಶ ನಾಡಿಗೇರ ಸೇರಿದಂತೆ ರಘೂತ್ತಮ ಭಜನಾ ಮಂಡಳಿ, ಪ್ರಮೋದಿನಿ ಮಹಿಳಾ ಭಜನಾ ಮಂಡಳಿ ,ಶ್ರೀ ಸತ್ಯಪ್ರಮೋದ ಯುವ ಸೇನೆಯ ಕಾರ್ಯಕರ್ತರು ಭಾಗವಹಿಸಿದ್ದರು.

ಅನಧಿಕೃತ, ಅಧಿಕಭಾರದ ಮರಳು ಸಾಗಾಣಿಕೆ ಮಾಡಿರುವ ಟಿಪ್ಪರ್ ವಾಹನಗಳ ವಿರುದ್ಧ ಕ್ರಮ

ಯಾದಗಿರಿ,ಫೆ.05-

ಯಾದಗಿರಿ ಜಿಲ್ಲೆಯ ಸುರಪುರ, ಶಹಾಪೂರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಅನಧಿಕೃತ, ಅಧಿಕಭಾರದ ಮರಳು ಸಾಗಾಣಿಕೆ ಮಾಡಿರುವ ಟಿಪ್ಪರ್ ವಾಹನಗಳ ವಿರುದ್ಧ ಕ್ರಮ ಕೈಗೊಂಡಿದೆ ಎಂದು ಯಾದಗಿರಿ ಗಣಿ ಮತ್ತು ಭೂವಿಜ್ಞಾನ ಇಲಾಖೆ ಹಿರಿಯ ಭೂವಿಜ್ಞಾನಿ ಅವರು ತಿಳಿಸಿದ್ದಾರೆ.

ಯಾದಗಿರಿ ಜಿಲ್ಲಾ ಮರಳು ನಿಯಂತ್ರಣಾ ಸಮಿತಿ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿ ಹರ್ಷಲ್ ಭೋಯರ್ ಅವರ ಸೂಚನೆಯಂತೆ



2026ರ ಫೆಬ್ರವರಿ 3 ರಂದು ಯಾದಗಿರಿ ಜಿಲ್ಲೆಯ ಸುರಪುರ, ಶಹಾಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಅನಧಿಕೃತ, ಅಧಿಕಭಾರದ ಮರಳು ಸಾಗಾಣಿಕೆ ವಾಹನಗಳು ಸಾಗಾಣಿಕೆಯಾಗುತ್ತಿರುವ ಕುರಿತು ದೂರಿನ ಮೇರೆಗೆ ಕಂದಾಯ ಇಲಾಖೆ, ಗಣಿ ಮತ್ತು ಭೂವಿಜ್ಞಾನ ಇಲಾಖೆ,ಸಾರಿಗೆ ಇಲಾಖೆ ಹಾಗೂ ಪೊಲೀಸ್ ಇಲಾಖೆ ಏಕ ಕಾಲದಲ್ಲಿ ಜಂಟಿಯಾಗಿ ಜಿಲ್ಲೆಯ ಸುರಪುರ ಮತ್ತು ಶಹಾಪುರ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಅನಧಿಕೃತ, ಅಧಿಕಭಾರದ ಮರಳು ಸಾಗಾಣಿಕೆ ವಾಹನಗಳನ್ನು ಪರಿಶೀಲಿಸಲು ರಾತ್ರಿ ಗಸ್ತು ಕಾರ್ಯ ಕೈಗೊಂಡು 7 ಮರಳು ತುಂಬಿದ ವಾಹನಗಳನ್ನು

ವಶಕ್ಕೆ ಪಡೆದು ನಿಯಮಾನುಸಾರ ಸರ್ಕಾರಕ್ಕೆ ದಂಡದ ಮೊತ್ತ 2,78,680ರ'ೂ.ಗ'ಳ' ಪಾವತಿಸಿಕೊಳ್ಳಲಾಗಿರುತ್ತದೆ. ಈ ಕೃತ್ಯದಲ್ಲಿ ಭಾಗಿಯಾಗಿರುವ ವಾಹನಗಳ ವಾಹನಗಳ ಸಾರಿಗೆ ಇಲಾಖೆಯ ನೊಂದಣಿಯನ್ನು ರದ್ದು ಪಡಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.

ಜಿಲ್ಲೆಯಲ್ಲಿ ಅನಧಿಕೃತ, ಅಧಿಕಭಾರದ ಮರಳು, ಇತರೆ ಉಪಖನಿಜಗಳ ಸಾಗಾಣಿಕೆಯನ್ನು ತಡೆಗಟ್ಟ ಕ್ರಮ ಕೈಗೊಳ್ಳಲು ಜಿಲ್ಲಾ, ತಾಲ್ಲೂಕು ಮಟ್ಟದ ಮರಳು ಸಮಿತಿ ಸದಸ್ಯರನ್ನೊಳಗೊಂಡ ತಂಡಗಳನ್ನು ರಚಿಸಿದ್ದು,

ಇನ್ನೊಮುಂದೆ ಜಿಲ್ಲೆಯಲ್ಲಿ ಅನಧಿಕೃತ, ಅಧಿಕಭಾರದ ಮರಳು, ಇತರೆ ಉಪಖನಿಜಗಳ ಸಾಗಾಣಿಕೆಯಾಗ'ುತ್ತಿರ'ುವ' ವಾಹನಗಳನ್ನು ಪರಿಶೀಲಿಸಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಜಿಲ್ಲಾಡಳಿತದಿಂದ ಸೂಚಿಸಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹನೀಯರ ಜಯಂತಿ ಅದ್ದೂರಿಯಾಗಿ ಆಚರಿಸೋಣ

ಬೀದರ, ಫೆ,05-

ಪ್ರತಿ ವರ್ಷದಂತೆ ಈ ವರ್ಷವು ಕೂಡ ಫೆಬ್ರುವರಿ. 15 ರಂದು ಬರುವ ಸಂತ ಸೇವಾಲಾಲ ಜಯಂತಿ ಹಾಗೂ ಫೆಬ್ರವರಿ.19 ರಂದು ಬರುವ ಛತ್ರ ಪತಿ ಶಿವಾಜಿ ಮಹಾರಾಜರ ಜಯಂತಿ ಯನ್ನು ಅದ್ದೂರಿಯಾಗಿ ಆಚರಿ ಸೋಣ ಎಂದು ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಬಿ.ಕರಾಳೆ ತಿಳಿಸಿದರು.

ಅವರು ಬುಧವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸಂತ ಸೇವಾಲಾಲ ಜಯಂತಿ ಹಾಗೂ ಛತ್ರಪತಿ ಶಿವಾಜಿ ಮಹಾರಾಜ ಜಯಂತಿ ಕುರಿತು ಕರೆದ ಪೂರ್ವ ಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಆಯಾ ಆಯಾ ದಿನಾಂಕದಂದು ಅರೆ ಸರ್ಕಾರಿ ಸಂಘ-ಸಂಸ್ಥೆಗಳಲ್ಲಿ ಬೆಳಿಗ್ಗೆ 9.45 ಗಂಟೆಗೆ ಸಂತ ಸೇವಾಲಾಲ ಹಾಗೂ ಛತ್ರಪತಿ ಶಿವಾಜಿ ಮಹಾರಾಜರ ಭಾವಚಿತ್ರಕ್ಕೆ ಪೂಜೆ



ಸಲ್ಲಿಸಿ, ಬೆಳಿಗ್ಗೆ 10 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಪೂಜೆ ಸಲ್ಲಿಸುವುದು. ನಂತರ ಸಂತ ಸೇವಾಲಾಲರ ಹಾಗೂ ಛತ್ರಪತಿ ಶಿವಾಜಿ ಮಹಾರಾಜ ಭಾವಚಿತ್ರದ ಮೆರವಣಿಗೆಯು ಶಿವಾಜಿ ವೃತ್ತದಿಂದ ಪ್ರಾರಂಭಗೊಂಡು ಹರಳಯ್ಯ ವೃತ್ತ, ಜನರಲ್ ಕರಿಯಪ್ಪ ವೃತ್ತ, ಅಂಬೇಡ್ಕರ ವೃತ್ತ, ಭಗತಸಿಂಗ ವೃತ್ತ, ಬಸವೇಶ್ವರ ವೃತ್ತ, ರೋಟರಿ ವೃತ್ತದಿಂದ ಪೂಜ್ಯ ಡಾ.ಚನ್ನಬಸವ ಪಟ್ಟದೇವರು ರಂಗಮಂದಿರದವರೆಗೆ ನಡೆಯು ವುದು ನಂತರ ವೇದಿಕೆ ಕಾರ್ಯಕ್ರಮ ಜರುಗಲಿದೆ ಎಂದರು.

ನಗರಸಭೆ ವತಿಯಿಂದ ಮೆರವಣಿಗೆ ಹಾದು ಹೋಗುವ ಮಾರ್ಗದಲ್ಲಿ ಸ್ವಚ್ಛತೆ, ಕುಡಿಯುವ ನೀರಿನ ವ್ಯವಸ್ಥೆ, ಶಿವಾಜಿ ವೃತ್ತಕ್ಕೆ ಸುಣ್ಣ ಬಣ್ಣ, ಅಲಂಕಾರ, ಎಲ್ಲ ವೃತ್ತಗಳ ಮೇಲೆ ದೀಪಾಲಂಕಾರ ಮಾಡುವುದು. ಶಿಕ್ಷಣ ಇಲಾಖೆ ವತಿಯಿಂದ ಛತ್ರಪತಿ ಶಿವಾಜಿಯವರ ಜೀವನ ಚರಿತ್ರೆ, ನಿಬಂಧ ಸ್ಪರ್ಧೆಗಳನ್ನು ಏರ್ಪಡಿಸಲು ಸಾರ್ವಜನಿಕ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ 2 ಕಲಾ ತಂಡಗಳ ವ್ಯವಸ್ಥೆ ಮಾಡು ವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾ ಖೆಯ ಸಹಾಯಕ ನಿರ್ದೇಶಕರಿಗೆ ಸೂಚಿಸಿದರು. ಪೊಲೀಸ್ ಇಲಾಖೆ ವತಿಯಿಂದ ಮೆರವಣಿಗೆ ಹಾದು ಹೋಗುವ ಸ್ಥಳಗಳಲ್ಲಿ ಸಂಚಾರಿ ನಿಯಂತ್ರಣ ಬಂದೋಬಸ್ತ ವ್ಯವಸ್ಥೆ ಮಾಡುವುದು.

ಈ ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಸಿದ್ರಾಮ ಶಿಂಧೆ, ಸಮಾಜದ ಮುಖಂಡರಾದ ಮದನ ರಾವ ಬಿರಾದಾರ, ವೆಂಕಟರಾವ ಮಹಾ ಂದೆ, ಮಾಧವರಾವ ಗುರೂಜಿ, ರಾಜಕುಮಾರ ಪಾಟೀಲ, ಅಶೋಕ ಚವ್ಹಾಣ, ಸುರೇಶ ರಾಠೋಡ, ಬಸವರಾಜ ಪವಾರ, ಜಿಲ್ಲಾ ಮಟ್ಟದ ಅಧಿಕಾರಿಗಳು ಸೇರಿದಂತೆ ಸಮಾಜದ ಮುಖಂಡರು ಉಪಸ್ಥಿತರಿದ್ದರು.

ವಸತಿ ಶಾಲೆಗಳ ಪ್ರವೇಶಕ್ಕೆ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಕೊಪ್ಪಳ,ಫೆ.05-

ಜಿಲ್ಲೆಯ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಡಾ: ಬಿ.ಆರ್.ಅಂಬೇಡ್ಕರ್, ಶ್ರೀಮತಿ ಇಂದಿರಾಗಾಂಧಿ ವಸತಿ ಶಾಲೆಗಳಿಗೆ 2026-27ನೇ ಸಾಲಿಗೆ 6ನೇ ತರಗತಿ ಆಂಗ್ಲ ಮಾಧ್ಯಮದಲ್ಲಿ ವ್ಯಾಸಂಗ ಮಾಡಲು ಪ್ರತಿಭಾನ್ವಿತ ಹಿಂದುಳಿದ, ಪ:ಜಾತಿ, ಪ:ಪಂಗಡ, ವಿಶೇಷ ವರ್ಗದ ಬಡ ವಿದ್ಯಾರ್ಥಿಗಳಿಂದ ಪ್ರವೇಶ ಪರೀಕ್ಷೆಗೆ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಕೆ ಅವಧಿಯನ್ನು ಫೆ.7 ರವರೆಗೆ ವಿಸ್ತರಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ http://kea.kar.nic.in ಹಾಗೂ http://kreis.kar.nic.in ವೆಬ್‌ಸೈಟ್ ಹಾಗೂ ಸಮೀಪದ ವಸತಿ ಶಾಲೆಗಳ ಪ್ರಾಂಶುಪಾಲರುಗಳನ್ನು ಸಂಪರ್ಕಿಸಬಹುದಾಗಿದೆ.

ಕ.ಕ.ರ.ಸಾ.ನಿ. ಕೊಪ್ಪಳ ವಿಭಾಗ: ಶಿಶಿಕ್ಷು ತರಬೇತಿಗೆ ಅರ್ಜಿ ಆಹ್ವಾನ

ಕೊಪ್ಪಳ,ಫೆ.05-

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ಕೊಪ್ಪಳ ವಿಭಾಗದಿಂದ ಶಿಶಿಕ್ಷು ಅಽನಿಯಮ 1961 ರನ್ವಯ ಪೂರ್ಣ ಅವಽಯ ತರಬೇತಿ ಪಡೆಯಲು ಕೊಪ್ಪಳ ವಿಭಾಗದ ವ್ಯಾಪ್ತಿಯಲ್ಲಿ ಇರುವ ಕೊಪ್ಪಳ, ಗಂಗಾವತಿ, ಕುಕನೂರು, ಯಲಬುರ್ಗಾ, ಕುಷ್ಟಗಿ ಹಾಗೂ ವಿಭಾಗೀಯ ಕಾರ್ಯಾಗಾರಗಳಲ್ಲಿ ತರಬೇತಿಗೆ ಅವಕಾಶವಿದ್ದು, ಅದರಂತೆ ವಿವಿಧ ವೃತ್ತಿಗಳಲ್ಲಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕರೆಯಲಾಗಿದೆ.

ಮೆಕ್ಯಾನಿಕ್ ಡೀಸಲ್ ವೃತ್ತಿ (ಮೆಕ್ಯಾನಿಕ್ ಡೀಸಲ್‌ನಲ್ಲಿ ಐ.ಟಿ.ಐ ಪಾಸಾಗಿರಬೇಕು) 15 ಅಭರ್ಥಿಗಳು, ಆಟೋ ಎಲೆಕ್ಟ್ರೀಷಿಯನ್ ವೃತ್ತಿ(ಆಟೋ ಎಲೆಕ್ಟ್ರೀಷಿಯನ್ ಐ.ಟಿ.ಐ ಪಾಸಾಗಿರಬೇಕು) 18 ಅಭ್ಯರ್ಥಿಗಳು ಹಾಗೂ ಆಟೋ ಬಾಡಿ ಬಿಲ್ಡರ್/ ಫಿಟ್ಟರ್(ಎಂ.ವಿ.ಬಿ.ಬಿ)(ಮೆಕ್ಯಾನಿಕ್ ಮೋಟರ್ ವಹಿಕಲ್/ ಫಿಟ್ಟರ್ ನಲ್ಲಿ ಐ.ಟಿ.ಐ ಪಾಸಾಗಿರಬೇಕು) 32 ಅಭ್ಯರ್ಥಿಗಳು ಸೇರಿದಂತೆ ಒಟ್ಟು 65 ಅಭ್ಯರ್ಥಿಗಳಿಗೆ 1 ವರ್ಷದ ಅವಽಗೆ ತರಬೇತಿ ನೀಡಲಾಗುವುದು.

ತರಬೇತಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳ ವಯಸ್ಸು 2026ರ ಜನವರಿ 31 ಕ್ಕೆ ಕನಿಷ್ಟ 18 ವರ್ಷಗಳು ತುಂಬಿರಬೇಕು. ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಗೆ ಗರಿಷ್ಟ 40 ವರ್ಷ ಮತ್ತು ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ 35 ವರ್ಷಗಳು ಮೀರಿರಬಾರದು. ಪರಿಶಿಷ್ಟ ಜಾತಿಯವರಿಗೆ ಶೇ.17 ರಷ್ಟು, ಪರಿಶಿಷ್ಟ ಪಂಗಡದವರಿಗೆ ಶೇ.7 ರಷ್ಟು ಸ್ಥಾನವನ್ನು ಮೀಸಲಾಗಿರಿಸಿದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ನಿಯಾನುಸಾರ ಕ.ಕ.ರ.ಸಾ. ನಿಗಮ, ಕೇಂದ್ರ ಕಛೇರಿ, ಕಲಬುರಗಿಯಿಂದ ಸೂಚಿಸುವ ಮೊತ್ತವನ್ನು ಮಾಹೆಯಾನ ಬ್ಯಾಂಕ್ ಖಾತೆ ಮುಖಾಂತರ ಮಾಸಿಕ ಶಿಶಿಕ್ಷು ತರಬೇತಿ ಭತ್ಯೆ ಪಾವತಿಸಲಾಗುವುದು. ಮೇಲಿನ ಖಾಲಿ ಸ್ಥಾನಗಳಲ್ಲಿ ಅವಶ್ಯಕತೆ ಅನುಸಾರ ಬದಲಾಯಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಲಾಗಿದೆ.

ಶಿಶಿಕ್ಷು ತರಬೇತಿಯು ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿದೆ. ಇದರನ್ವಯ ಈಗಾಗಲೇ ಶಿಶಿಕ್ಷು ಕಾಯ್ದೆ 1961 ರ ಅನ್ವಯ ಯಾವುದೇ ವೃತ್ತಿಯಲ್ಲಿ ಶಿಶಿಕ್ಷು ತರಬೇತಿ ಪಡೆದಿರುವವರು ಅರ್ಜಿ ಸಲ್ಲಿಸಲು ಅರ್ಹರಲ್ಲ. ಶಿಶಿಕ್ಷು ತರಬೇತಿ ಪೂರ್ತಿಯಾದ ನಂತರ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ ತರಬೇತಿ ಪಡೆದ ಅಭ್ಯರ್ಥಿಗಳಿಗೆ ಕೆಲಸ ನೀಡುವ ಬಗ್ಗೆ ಹೊಣೆಗಾರರಾಗುವುದಿಲ್ಲ ಹಾಗೂ ಯಾವುದೇ ಒಪ್ಪಂದಕ್ಕೆ ಒಳಪಟ್ಟಿರುವುದಿಲ್ಲ. ಅಭ್ಯರ್ಥಿಗಳಿಗೆ ಕನ್ನಡ ಭಾಷೆಯನ್ನು ಓದಲು, ಬರೆಯಲು ಮತ್ತು ಮಾತನಾಡಲು ಕಡ್ಡಾಯವಾಗಿ ತಿಳಿದಿರಬೇಕು. ತರಬೇತಿ ನಿಯೋಜನೆಗೆ ಸಂಬಂಽಸಿದಂತೆ ಯಾವುದೇ ರೀತಿಯ ಶಿಫಾರಸ್ಸು ಅಥವಾ ಒತ್ತಡಗಳಿಗೆ ಆಸ್ಪದ ಇರುವುದಿಲ್ಲ. ನಿಯೋಜನಾ ಪ್ರಾಽಕಾರಸ್ಥರುಗಳ ತೀರ್ಮಾನವೇ ಅಂತಿಮ. ಈ ಬಗ್ಗೆ ಯಾವುದೇ ಪತ್ರ ವ್ಯವಹಾರಕ್ಕೆ ಆಸ್ಪದವಿಲ್ಲ. ಶಿಶಿಕ್ಷು ತರಬೇತಿಗೆ ನಿಯೋಜನೆಗೊಂಡ ಅಭ್ಯರ್ಥಿಗಳು ದೈಹಿಕ ಅರ್ಹತೆ ಪಡೆದಿರಬೇಕು ಮತ್ತು ತರಬೇತಿಗೆ ಹಾಜರಾಗುವ ಮುನ್ನ ಜಿಲ್ಲಾ ವೈದ್ಯಾಽಕಾರಿಗಳಿಂದ ವೈದ್ಯಕೀಯ ಪ್ರಮಾಣ ಪತ್ರ ಸಲ್ಲಿಸಬೇಕು. ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಗಳು ಕೊಪ್ಪಳ ವಿಭಾಗದ ವ್ಯಾಪ್ತಿಯಲ್ಲಿ ಬರುವ ಘಟಕ ಹಾಗೂ ಕೊಪ್ಪಳ ವಿಭಾಗೀಯ ಕಾರ್ಯಾಗಾರದಲ್ಲಿ ಮಾತ್ರ ತರಬೇತಿ ಪಡೆಯಲು ಸಿದ್ಧರಿರಬೇಕು.

ತರಬೇತಿಗೆ ನಿಗದಿತ ಅರ್ಜಿ ನಮೂನೆಯಲ್ಲಿ ಅಭ್ಯರ್ಥಿಗಳು ತಮ್ಮ ಸ್ವಂತ ಕೈ ಬರಹದಿಂದ ವಿವರವನ್ನು ನಮೂದಿಸಿ ಅರ್ಜಿಯೊಂದಿಗೆ ಜನ್ಮ ದಿನಾಂಕ, ವಿದ್ಯಾರ್ಹತೆಗೆ ಸಂಬಂಽಸಿದ ಪ್ರಮಾಣ ಪತ್ರಗಳ ನಕಲು ಪ್ರತಿಗಳನ್ನು ಹಾಗೂ ಪ.ಜಾ/ ಪ.ಪಂ ಸಂಬಂಧಪಟ್ಟಂತೆ ಜಾತಿ ಪ್ರಮಾಣ ಪತ್ರಗಳನ್ನು ಲಗತ್ತಿಸಿ, ಇತ್ತೀಚಿನ ಪಾಸ್‌ಪೋರ್ಟ ಸೈಜಿನ ಭಾವ ಚಿತ್ರವನ್ನು ಅರ್ಜಿಗೆ ಅಂಟಿಸಿ ಸಂಬಂಽಸಿದ ಎಲ್ಲಾ ದಾಖಲೆಗಳ ಮೂಲ ಪ್ರಮಾಣ ಪತ್ರಗಳು ಹಾಗೂ ಒಂದು ಜೊತೆ ಛಾಯಾ ಪ್ರತಿಗಳೊಂದಿಗೆ ''ವಿಭಾಗೀಯ ನಿಯಂತ್ರಣಾಽಕಾರಿ, ಕ.ಕ.ರ.ಸಾ.ನಿಗಮ, ಕೊಪ್ಪಳ ವಿಭಾಗ'' ಇವರಲ್ಲಿ ಫೆಬ್ರವರಿ 26 ರಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 1.30 ರ ವರೆಗೆ ಸ್ವಂತ ಖರ್ಚಿನಲ್ಲಿ ನೇರ ಸಂದರ್ಶನಕ್ಕೆ ಹಾಜರಾಗತಕ್ಕದ್ದು.

ಸಂದರ್ಶನದ ನಂತರ ನಿಯೋಜನೆಗೆ ಆಯ್ಕೆಗೊಂಡ ಅಭ್ಯರ್ಥಿಗಳ ಹೆಸರುಗಳನ್ನು ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು. ಶಿಶಿಕ್ಷು ತರಬೇತಿ ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು ಮೊಬೈಲ್ ಸಂಖ್ಯೆ, ಆಧಾರ ಕಾರ್ಡ ಪ್ರತಿ, ಇ-ಮೇಲ್ ವಿಳಾಸದ ದಾಖಲೆಗಳನ್ನು ಹೊಂದಿರಬೇಕು ಹಾಗೂ ರಾಷ್ಟ್ರೀಕೃತ ಬ್ಯಾಂಕಿನ ಖಾತೆಯನ್ನು ಹೊಂದಿದ್ದು, ಆ ಖಾತೆಗೆ ಆಧಾರ ಕಾರ್ಡ ಸಂಖ್ಯೆ ಜೋಡಣೆಯಾಗಿರಬೇಕು. ಶಿಶಿಕ್ಷು ತರಬೇತಿ ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳ ಹೆಸರು, ತಂದೆಯ ಹೆಸರು, ಅಡ್ಡ ಹೆಸರು ಹಾಗೂ ಜನ್ಮ ದಿನಾಂಕವು ಎಸ್.ಎಸ್.ಎಲ್.ಸಿ ಅಂಕಪಟ್ಟಿ ಹಾಗೂ ಆಧಾರ ಕಾರ್ಡನಲ್ಲಿ ಒಂದೇ ತೆರನಾಗಿರಬೇಕು. ಇಲ್ಲವಾದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಎಲ್ಲಾ ರೀತಿಯಲ್ಲಿ ಮಾಹಿತಿ ಸರಿಯಾಗಿರುವ ಅಭ್ಯರ್ಥಿಗಳು www. apprenticeshipindia.gov.in ನಲ್ಲಿ ನೋಂದಣಿ ಮಾಡಿಕೊಂಡು ಪೋರ್ಟಲ್‌ನಿಂದ DIVISIONAL CONTROLLER, KKRTC KOPPAL DIVISION, ESTABLESHMENT (E06162900063) ನಲ್ಲಿ ಫೆಬ್ರವರಿ 25 ರ ಸಂಜೆ 5.30 ರೊಳಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ನೋಂದಣಿ ಇಲ್ಲದೇ ಇರುವಂತಹ ಅಭ್ಯರ್ಥಿಗಳನ್ನು ಅನರ್ಹಗೊಳಿಸಲಾಗುವುದು ಎಂದು ಕೊಪ್ಪಳ ವಿಭಾಗೀಯ ನಿಯಂತ್ರಣಾಽಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಮ್ಮೂರು ಸುದ್ದಿ

ಸಂಪಾದಕೀಯ

ಇಸ್ರೇಲ್ ಸಂಗದಲ್ಲಿ ಶಿಕಾರಿ- ಪ್ಯಾಲೆಸ್ತೀನ್ ಜೊತೆ ಪರಾರಿ; ಕಪಟ ನಾಟಕವಲ್ಲವೇ ಮೋದೀಜಿ?



ಪ್ಯಾಲೆಸ್ತೀನ್ ಹೋರಾಟವನ್ನು ಬೆಂಬಲಿಸುತ್ತೇನೆ ಎಂಬ ವಿಶೇಷ ವಿನ್ಯಾಸದ ಹೆಗಲು ಚೀಲವನ್ನು ನೇತಾಡಿಸಿಕೊಂಡು ಸಂಸತ್ ಭವನಕ್ಕೆ ಬಂದ ಪ್ರಿಯಾಂಕಾ ಗಾಂಧಿ, ಪ್ಯಾಲೆಸ್ತೀನ್ ವಿದೇಶಾಂಗ ನೀತಿ ಕುರಿತು ಮೋದಿ ಸರ್ಕಾರಕ್ಕೆ ಬುದ್ಧಿ ಹೇಳಿರುವ ಸೋನಿಯಾಗಾಂಧಿ ಹಾಗೂ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ತಮ್ಮ ಪಕ್ಷದ ಆಡಳಿತವಿರುವ ಕರ್ನಾಟಕ ಸರ್ಕಾರವು ಪ್ಯಾಲೆಸ್ತೀನ್ ಪರ ಶಾಂತಿಯುತ ಪ್ರದರ್ಶನಗಳ ಕುರಿತು ತಳೆಯುತ್ತ ಬಂದಿರುವ ದಮನಕಾರಿ ನೀತಿಯತ್ತ ತುರ್ತಾಗಿ ಗಮನ ಹರಿಸಬೇಕಿದೆ.

ಪ್ಯಾಲೆಸ್ತೀನ್ ಡೇರೆಯನ್ನು ಅಂಗುಲಂಗುಲವಾಗಿ ಆಕ್ರಮಿಸಿದ ಇಸ್ರೇಲಿ ಒಂಟೆ, ಕಾಲಕ್ರಮೇಣ ಇಡೀ ಡೇರೆಯನ್ನು ತನ್ನದೆಂದು ಸಾರಿ, ಪ್ಯಾಲೆಸ್ತೀನಿ ನೆಲದ ಮಕ್ಕಳನ್ನು ನಿಂತಲ್ಲಿ ನಿಲ್ಲಲು ಬಿಡದೆ ಅಟ್ಟಾಡಿಸಿ, ಉಪವಾಸ ಕೆಡವಿ, ಬಾಂಬು ಸುರಿಸಿ ಅಳಿಸಿ ಹಾಕುತ್ತಿರುವ ಶಿಖರ ಕ್ರೌರ್ಯದ ಕತೆ ಪ್ಯಾಲೆಸ್ತೀನ್- ಇಸ್ರೇಲ್ ಸಂಘರ್ಷ.

ಗಾಝಾ ಪಟ್ಟಿಯ ಆಳವನ್ನು ಅಗೆದರೆ ಅಲ್ಲಿ ಸಿಗುವುದು ಪ್ಯಾಲೆಸ್ತೀನೀ ಮಕ್ಕಳು, ಹೆಣ್ಣುಮಕ್ಕಳು, ಗಂಡಾಳುಗಳ ಶವಗಳ ರಾಶಿ ರಾಶಿ ಅಸ್ಥಿಪಂಜರಗಳೇ. ಇಂತಹ ಸಮಾಧಿಯ ಮೇಲೆ ಸ್ವರ್ಗಸದೃಶ ವಿಲಾಸೀ ನಗರ ನಿರ್ಮಿಸಿ, ಅಲ್ಲಿನ ವಸತಿವೈಭವವನ್ನು ವಿಶ್ವದ ಸಿರಿವಂತರಿಗೆ ಮಾರಾಟ ಮಾಡುವುದು ಟ್ರಂಪ್ ಎಂಬ ನೀಚ ಮನಸ್ಥಿತಿಯ ದುಷ್ಟ ಯೋಜನೆ.

ಪ್ಯಾಲೆಸ್ತೀನ್ ಒಂದು ಸ್ವತಂತ್ರ ಸಾರ್ವಭೌಮ ರಾಷ್ಟ್ರವಾಗಿ ಇಸ್ರೇಲ್ ನೆರೆಹೊರೆಯಲ್ಲಿ ಶಾಂತಿಯುತವಾಗಿ ಸಹಬಾಳ್ವೆ ನಡೆಸಬೇಕೆಂಬುದು ಭಾರತ ಲಾಗಾಯತಿನಿಂದ ನಡೆಸಿಕೊಂಡು ಬಂದಿರುವ ವಿದೇಶಾಂಗ ನೀತಿ. 1967ರ ಹಿಂದಿದ್ದ ಗಡಿ ಪ್ರದೇಶಗಳಿಗೆ ಅನುಗುಣವಾಗಿ ಈ ವ್ಯವಸ್ಥೆ ಇರಬೇಕು ಎಂಬುದು ನಮ್ಮ ದೃಢ ನಿಲುವು.

ಮಹಾತ್ಮಗಾಂಧೀ, ನೆಹರೂ, ಜನಸಂಘದ ದೀನದಯಾಳ ಉಪಾಧ್ಯಾಯ, ಜನಸಂಘ ಬಿಜೆಪಿಯ ಅಟಲ್ ಬಿಹಾರಿ ವಾಜಪೇಯಿ, ವಿಯೆಟ್ನಾಮಿನ ಹೋ- ಚಿ- ಮಿನ್, ದಕ್ಷಿಣ ಆಫ್ರಿಕಾದ ನೆಲ್ಸನ್ ಮಂಡೇಲ ಎಲ್ಲರೂ ಪ್ಯಾಲೆಸ್ತೀನನ್ನು ಇಸ್ರೇಲ್ ಆಕ್ರಮಿಸಿಕೊಂಡಿದೆಯೆಂದು ಸಾರಿದ್ದರು ಮತ್ತು ಸ್ವತಂತ್ರ ಪ್ಯಾಲೆಸ್ತೀನನ್ನು ಬೆಂಬಲಿಸಿದ್ದರು.

ಇತ್ತೀಚೆಗೆ ಮುಕ್ತಾಯಗೊಂಡ ಭಾರತ-ಅರಬ್ ವಿದೇಶಾಂಗ ಮಂತ್ರಿಗಳ ಎರಡನೆಯ ಸಭೆಯ ಆತಿಥ್ಯವನ್ನು ಭಾರತ ಸರ್ಕಾರವೇ ವಹಿಸಿಕೊಂಡಿತ್ತು. ಗಾಝಾ ಶಾಂತಿ ಯೋಜನೆಯೂ ಸೇರಿದಂತೆ ನಡೆದಿರುವ ಶಾಂತಿ ಪ್ರಯತ್ನಗಳಿಗೆ ಭಾರತದ ಮುಂದುವರೆದ ಬೆಂಬಲ ಮತ್ತು ಪ್ಯಾಲೆಸ್ತೀನ್ ಜನರ ಹೋರಾಟದೊಂದಿಗೆ ಗಟ್ಟಿಯಾಗಿ ನಿಲ್ಲುವ ಭಾರತದ ನೀತಿಯನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಈ ಸಂದರ್ಭದಲ್ಲಿ ಪುನರುಚ್ಚರಿಸಿದರು.

ಜನಸಂಘ-ಬಿಜೆಪಿಯ ತಾಯಿಬೇರು ಆರೆಸ್ಸೆಸ್. ಸೈದ್ಧಾಂತಿಕವಾಗಿ ಇಸ್ರೇಲ್ ಮತ್ತು ಇಸ್ರೇಲಿ ರಾಷ್ಟ್ರೀಯತೆಯನ್ನು ಆದರ್ಶವಾಗಿ ಪರಿಗಣಿಸಿದೆ ಆರೆಸ್ಸೆಸ್. ಆರೆಸ್ಸೆಸ್‌ನ ಬಹು ಎತ್ತರದ ನೇತಾರ ಮಾಧವರಾವ್ ಸದಾಶಿವರಾವ್ ಗೋಲ್ವಲ್ಕರ್ ಅವರ ಚಿಂತನೆಗಳನ್ನು ಗೊಂಚಲಾಗಿ ಕಟ್ಟಿಕೊಟ್ಟಿರುವ ಕೃತಿ ಬಂಚ್ ಆಫ್ ಥಾಟ್ಸ್ ಅಥವಾ ಚಿಂತನಗಂಗಾದಲ್ಲಿ ಈ ಆದರ್ಶವನ್ನು ಸಂಶಯಕ್ಕೆ ಎಡೆಯಿಲ್ಲದಂತೆ ಚಿತ್ರಿಸಲಾಗಿದೆ.

ಅಟಲ ಬಿಹಾರಿ ವಾಜಪೇಯಿ ಪ್ರಧಾನಿಯಾಗಿದ್ದಾಗ ಸಣ್ಣಗೆ ಆರಂಭವಾದ ಭಾರತದ ಇಸ್ರೇಲಿ ದೋಸ್ತಿ, ಮೋದಿಯುಗದಲ್ಲಿ ಹೆಮ್ಮರವಾಗಿ ಬೆಳೆದಿದೆ. ಈ ಹೆಮ್ಮರದ ಕರಿನೆರಳು ಭಾರತದ ಪ್ಯಾಲೆಸ್ತೀನ್ ಪರ ನೀತಿ ನಿರ್ಧಾರಗಳ ಮೇಲೆ ಚಾಚಿದೆ. ಇಸ್ರೇಲ್ ಪ್ರಧಾನಿ ಬೆಂಜಮಿನ್ ನೇತನ್ಯಾಹು ಮತ್ತು ಮೋದಿಯವರು ಪರಮಮಿತ್ರರಾಗಿ ಕಾಣಿಸಿಕೊಂಡಿದ್ದಾರೆ. ಇದರಲ್ಲಿ ಗುಟ್ಟೇನೂ ಇಲ್ಲ. ಆದರೆ ವೈಯಕ್ತಿಕ ಸ್ನೇಹವು ಭಾರತದ ಅನೂಚಾನ ವಿದೇಶಾಂಗ ನೀತಿಗೆ ಗ್ರಹಣ ಹಿಡಿಸಿದರೆ ಅದು ಖಡಾಖಂಡಿತವಾಗಿ ಸಲ್ಲದು.

ಆದರೆ ಬೇರು ಮಟ್ಟದಲ್ಲಿ ಮೋದಿ-ನೇತನ್ಯಾಹು ದೋಸ್ತಿಯ ನೆರಳೇ ಪ್ರತಿಫಲಿಸತೊಡಗಿದೆ. ಇದು ಕಣ್ಣಿಗೆ ಕಾಣುವ ಕಟು ವಾಸ್ತವ. ಭಾರತದಲ್ಲಿನ ಪ್ಯಾಲೆಸ್ತೀನ್ ಪರ ಶಾಂತಿಯುತ ಪ್ರತಿಭಟನೆಗಳು- ಪ್ರದರ್ಶನಗಳು- ಸಭೆಗಳು-ವಿಚಾರಸಂಕಿರಣಗಳ ಮೇಲೆ, ವಿಶೇಷವಾಗಿ 20232024ರಿಂದ ಕಠಿಣ ಕ್ರಮಗಳನ್ನು ಜರುಗಿಸಲಾಗುತ್ತಿದೆ. ಈ ಮಾತಿಗೆ ಸಾಕಷ್ಟು ಪುರಾವೆಗಳಿವೆ. ಪ್ಯಾಲೆಸ್ತೀನ್ ಧ್ವಜ ಹಾರಿಸುವುದು, ಆನ್‌ಲೈನ್‌ನಲ್ಲಿ ಬೆಂಬಲ ವ್ಯಕ್ತಪಡಿಸುವುದು, ಮೆರವಣಿಗೆಗಳ ಸಂಘಟನೆ ಅಥವಾ ಇಸ್ರೇಲಿ ಉತ್ಪನ್ನಗಳ ಬಹಿಷ್ಕಾರಕ್ಕೆ ಕರೆ ನೀಡಿದ ಕಾರಣಕ್ಕೆ ಯುಪಿಎ ಅಥವಾ ದೇಶದ್ರೋಹ ಕಾನೂನಿಡಿ ಬಂಧನಗಳು/ನಿರ್ಬಂಧಗಳು ವರದಿಯಾಗಿವೆ. ಪ್ಯಾಲೆಸ್ತೀನೀಯರ ಕುರಿತು ಮರುಗಿರುವ ಮುಸಲ್ಮಾನರು ಈ ದಮನಕ್ಕೆ ನೇರವಾಗಿ ಹೆಚ್ಚಿನ ಪ್ರಮಾಣದಲ್ಲಿ ಬಾಧಿತರು.

2024-2025ರಲ್ಲಿ ದೆಹಲಿ ವಿಶ್ವವಿದ್ಯಾಲಯ, ಹೈದರಾಬಾದಿನ ಇಎಫ್‌ಎಲ್‌ಯು, ಉತ್ತರಪ್ರದೇಶದ ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯ ಮುಂತಾದ ಕ್ಯಾಂಪಸ್‌ಗಳಲ್ಲಿ ಪ್ರತಿಭಟನೆಗಳನ್ನು ಚದುರಿಸಲು ಪೊಲೀಸರ ಹಸ್ತಕ್ಷೇಪ- ಬಲಪ್ರಯೋಗ, ಹಲ್ಲೆ ಅಥವಾ ಎಬಿವಿಪಿ ಮುಂತಾದ ಬಲಪಂಥೀಯ ಗುಂಪುಗಳೊಂದಿಗೆ ಪೊಲೀಸರು ಸಹಕರಿಸಿರುವ ಆರೋಪಗಳಿವೆ.

ಪೂರ್ವಾನುಮತಿ ಇಲ್ಲದೆ ಕ್ಯಾಂಪಸ್ ಚರ್ಚೆಗಳು ಅಥವಾ ಘೋಷಣೆಗಳ ಮೇಲೆ ನಿಷೇಧ/ನಿರ್ಬಂಧಗಳು ಮತ್ತು ಪ್ಯಾಲೆಸ್ತೀನ್ ಪರ ಅಭಿವ್ಯಕ್ತಿಗಳ ಅಪರಾಧೀಕರಣ ಜರುಗಿದೆ. ವಿರೋಧಾಭಾಸ ಎಂಬಂತೆ ಇಸ್ರೇಲ್ ಪರ ರ‍್ಯಾಲಿಗಳಿಗೆ ಕಡಿಮೆ ನಿರ್ಬಂಧಗಳು ಎದುರಾದ ವರದಿಗಳಿವೆ.

ಅಧಿಕಾರಿಗಳು ಈ ಕ್ರಮಗಳನ್ನು ಸಾರ್ವಜನಿಕ ಶಾಂತಿ ಸುವ್ಯವಸ್ಥೆ ಕಾಪಾಡುವುದು ಅಥವಾ ''ತೀವ್ರವಾದ''ವನ್ನು ನಿಯಂತ್ರಿಸುವುದು ಎಂದು ಸಮರ್ಥಿಸಿಕೊಳ್ಳುತ್ತಾರೆ.. ಆದರೆ ಮಾನವ ಹಕ್ಕು ಸಂಘಟನೆಗಳು ಮತ್ತು ಅವುಗಳ ಕಾರ್ಯಕರ್ತರು ಇದನ್ನೇ ಅಭಿವ್ಯಕ್ತಿ ಸ್ವಾತಂತ್ರ್ಯದ ದಮನ ಎಂದಿದ್ದಾರೆ. ಇಸ್ರೇಲ್ ಪರ ನಿಲುವಿನೊಂದಿಗೆ ಹೊಂದಾಣಿಕೆ ಎಂದು ಬಣ್ಣಿಸಿದ್ದಾರೆ. ಭಾರತದ ಪ್ಯಾಲೆಸ್ತೀನ್ ಪರ ವಿದೇಶಾಂಗ ನೀತಿಯ ಪಕ್ಕದಲ್ಲಿ ಇರಿಸಿ ನೋಡಿದರೆ ಈ ದಮನಕ್ರಮಗಳು ದ್ವಂದ್ವ ಮಾನದಂಡಗಳತ್ತ ಬೆರಳು ಮಾಡಿ ತೋರುತ್ತಿವೆ.

ಇದು ಪ್ಯಾಲೆಸ್ತೀನ್ ಅಥವಾ ಇಸ್ರೇಲ್ ನಡುವೆ ಒಂದನ್ನು ಆರಿಸಿಕೊಳ್ಳುವ ವಿಷಯ ಅಲ್ಲ. ಬದಲಿಗೆ ಸತ್ಯ ಮತ್ತು ಸಿದ್ಧಾಂತದ ಸಂಗಡ ನಿಲ್ಲುವುದು. ತೆಪ್ಪಗಿರುವುದು ಅನ್ಯಾಯವನ್ನು ಸದ್ದಿಲ್ಲದೆ ಸಮರ್ಥಿಸಿದಂತೆ ಎಂದು ಕಾಂಗ್ರೆಸ್ ನಾಯಕಿ ಸೋನಿಯಾಗಾಂಧೀ ಹೇಳಿದ್ದಾರೆ.

ಇಸ್ರೇಲ್- ಪ್ಯಾಲೆಸ್ತೀನ್ ಸಂಘರ್ಷ ಕುರಿತ ಭಾರತದ ನಿಲುವು ನಿರಾಶಾಜನಕ. ಮೋದಿ ಸರ್ಕಾರದ ಗಾಢ ಮೌನವು ಮಾನವೀಯತೆ ಮತ್ತು ನೈತಿಕತೆಗೆ ವಿಶ್ವಾಸದ್ರೋಹ ಬಗೆದಂತೆ. ಲಾಗಾಯಿತಿನಿಂದ ನಡೆದುಕೊಂಡು ಬಂದಿರುವ ಭಾರತದ ವಿದೇಶಾಂಗ ನೀತಿಗೆ ಅನುಗುಣವಾದ ನಡೆಯಲ್ಲ ಇದು. ನೈತಿಕತೆ ಮತ್ತು ನಾಗರಿಕತೆಯೊಂದಿಗೆ ಲಗತ್ತಾಗಿರುವ ಹೊಣೆಗಾರಿಕೆ ಕೂಡ. ಸ್ವಾತಂತ್ರ್ಯಪೂರ್ವದಲ್ಲೇ ದಕ್ಷಿಣ ಆಫ್ರಿಕಾದ ವರ್ಣಭೇದ ನೀತಿಯ ವಿರುದ್ಧ ದನಿ ಎತ್ತಿತ್ತು ಭಾರತ. 1971ರಲ್ಲಿ ಪೂರ್ವ ಪಾಕಿಸ್ತಾನದಲ್ಲಿ (ಇಂದಿನ ಬಾಂಗ್ಲಾದೇಶ) ನರಮೇಧ ನಿಲ್ಲಿಸಲು ಭಾರತ ನಿರ್ಣಾಯಕ ಮಧ್ಯಪ್ರವೇಶ ಮಾಡಿತ್ತು ಎಂಬ ಸಂಗತಿಗಳನ್ನು ಸೋನಿಯಾ ಅವರು, ಮೋದಿ ಸರ್ಕಾರಕ್ಕೆ ನೆನಪಿಸಿಕೊಟ್ಟಿದ್ದಾರೆ.

ಆದರೆ ಇಲ್ಲೊಂದು ಮಹಾನ್ ವಿಡಂಬನೆ-ವಿಪರ್ಯಾಸವಿದೆ. ಕಾಂಗ್ರೆಸ್ ಶಾಸಿತ ರಾಜ್ಯ ಸರ್ಕಾರಗಳೂ ಮೋದಿಯವರ ವ್ಯಕ್ತಿಗತ ಇಸ್ರೇಲ್ ಪರ ಒಲವು ನಿಲುವುಗಳನ್ನೇ ಚಾಚೂತಪ್ಪದೆ ಅನುಸರಿಸತೊಡಗಿವೆ

ಸೋನಿಯಾ ಅವರ ಮಾತುಗಳನ್ನು ಕಾಂಗ್ರೆಸ್ ಶಾಸಿತ ರಾಜ್ಯ ಸರ್ಕಾರಗಳು ಗಾಳಿಗೆ ತೂರಿದಂತೆ ವರ್ತಿಸತೊಡಗಿವೆ. ಬಹಳ ದೂರ ಹೋಗುವ ಅಗತ್ಯವಿಲ್ಲ. ಕರ್ನಾಟಕದಲ್ಲಿನ ಪರಿಸ್ಥಿತಿಯೇ ಕಣ್ಣಿಗೆ ರಾಚುವಷ್ಟು ನಿಚ್ಚಳವಾಗಿದೆ. ಪ್ಯಾಲೆಸ್ತೀನ್ ಮೇಲೆ ಇಸ್ರೇಲ್ ದಮನವನ್ನು ಖಂಡಿಸಿ, ಪ್ಯಾಲೆಸ್ತೀನೀಯರ ಹೋರಾಟವನ್ನು ಬೆಂಬಲಿಸಿ ನಡೆಸುವ ಶಾಂತಿಯುತ ಸಭೆಗಳು ಪ್ರದರ್ಶನಗಳನ್ನು ಸಿದ್ದರಾಮಯ್ಯ ಅವರ ಸರ್ಕಾರದ, ಡಾ.ಜಿ.ಪರಮೇಶ್ವರ್ ನೇತೃತ್ವದ ಪೊಲೀಸ್ ಇಲಾಖೆ ಉಕ್ಕಿನ ಹಸ್ತದಿಂದ ಹತ್ತಿಕ್ಕುತ್ತ ಬಂದಿದೆ. ಪ್ಯಾಲೆಸ್ತೀನ್ ಧ್ವಜ ಹಾರಿಸಲು ನಿರ್ಬಂಧಗಳಿವೆ. ಪ್ರದರ್ಶನಕಾರರು 50 ಮಂದಿ ಇದ್ದರೆ ಪೊಲೀಸರು 150 ಮಂದಿ ಅವರನ್ನು ಮುತ್ತಿರುತ್ತಾರೆ. ಬಿಜೆಪಿ ನೇತೃತ್ವದ ಸರ್ಕಾರವನ್ನು ಸೋಲಿಸಿ, ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದ ನಂತರವೂ ಈ ಸ್ಥಿತಿ ಎಳ್ಳಷ್ಟೂ ಬದಲಾಗಿಲ್ಲ. ಈ ದಮನದ ಕುರಿತು ನಾಡಿನ ಪ್ರಜ್ಞಾವಂತ ವರ್ಗ ತೀವ್ರ ಆಘಾತ ಮತ್ತು ಸೋಜಿಗವನ್ನು ಪ್ರಕಟಿಸುತ್ತ ಬಂದಿದೆ. ಈಗ ನಡೆಯುತ್ತಿರುವ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಕೂಡ ಪ್ಯಾಲೆಸ್ತೀನ್ ಚಲನಚಿತ್ರಗಳಿಗೆ ಅವಕಾಶ ನಿರಾಕರಿಸಲಾಗಿದೆ. ಉತ್ಸವಕ್ಕೆ ಚಾಲನೆ ನೀಡಿದ ನಟ ಪ್ರಕಾಶ್ ರೈ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯನವರ ಮುಂದೆಯೇ ಈ ಕುರಿತು ತಮ್ಮ ಪ್ರತಿಭಟನೆ ದಾಖಲಿಸಿದರು. ಪ್ಯಾಲೆಸ್ತೀನಿ ಕವಿತೆಗಳನ್ನು ಓದಿ ತಮ್ಮ ವಿರೋಧ ದಾಖಲಿಸಿದರು.

ನಾನು ಪ್ಯಾಲೆಸ್ತೀನ್ ಹೋರಾಟವನ್ನು ಬೆಂಬಲಿಸುತ್ತೇನೆ ಎಂದು ಬರೆದ ವಿಶೇಷ ವಿನ್ಯಾಸದ ರಂಗುರಂಗಿನ ಹೆಗಲು ಚೀಲವನ್ನು ನೇತಾಡಿಸಿಕೊಂಡು ಸಂಸತ್ ಭವನಕ್ಕೆ ಬಂದ ಪ್ರಿಯಾಂಕಾ ಗಾಂಧೀ, ಮೋದಿ ಸರ್ಕಾರಕ್ಕೆ ಬುದ್ಧಿ ಹೇಳಿರುವ ಸೋನಿಯಾಗಾಂಧೀ ಹಾಗೂ ಲೋಕಸಭೆಯಲ್ಲಿ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧೀ ಅವರು ತಮ್ಮ ಪಕ್ಷದ ಸರ್ಕಾರಗಳು ಪ್ಯಾಲೆಸ್ತೀನ್ ಪರ ಶಾಂತಿಯುತ ಪ್ರದರ್ಶನಗಳ ಕುರಿತು ತಳೆಯುತ್ತ ಬಂದಿರುವ ದಮನಕಾರಿ ನೀತಿಯತ್ತ ತುರ್ತಾಗಿ ಗಮನ ಹರಿಸಬೇಕಿದೆ. ಇಲ್ಲವಾದರೆ ಈ ತಾಯಿ-ಮಕ್ಕಳ ಮಾತುಗಳಿಗೆ ಅರ್ಥ ಉಳಿಯುವುದಿಲ್ಲ.

ಸಿಎಂ ಕುರ್ಚಿಗೆ ಟೇಕ್ವಾಂಡೋ ಚಾಂಪಿಯನ್: ಖೇಮ್ ಚಂದ್ ಮುಂದೆ ಮಣಿಪುರದ ಶಾಂತಿಯ ಯಕ್ಷಪ್ರಶ್ನೆ!

ಈಗ ಹೊತ್ತಿ ಉರಿಯುತ್ತಿರುವ ಮಣಿಪುರವನ್ನು ತಣಿಸಲು ನೆರವಾಗಬಲ್ಲದೇ ಎಂಬುದು ಈಗಿನ ಪ್ರಶ್ನೆ. ಆದರೆ, ಸಿಎಂ ಕುರ್ಚಿ ಖೇಮ್ ಚಂದ್ ಪಾಲಿಗೆ ಮುಳ್ಳಿನ ಹಾಸಿಗೆಯಾಗಿದೆ. ಒಂದೆಡೆ, ಪ್ರತ್ಯೇಕ ಆಡಳಿತಕ್ಕಾಗಿ ಆಗ್ರಹಿಸುತ್ತಿರುವ ಕುಕಿ ಸಂಘಟನೆಗಳ ಬೇಡಿಕೆ, ಇನ್ನೊಂದೆಡೆ ಮೈತೇಯಿ ಸಮುದಾಯದ ಅಸ್ಮಿತೆಯ ರಕ್ಷಣೆ ಈ ಎರಡರ ನಡುವೆ ಸಮತೋಲನ ಕಾಯ್ದುಕೊಳ್ಳುವುದು ಕಷ್ಟಕರ ಸವಾಲು

ಸುದೀರ್ಘ ಅವಧಿಯ ಜನಾಂಗೀಯ ಸಂಘರ್ಷ, ಹಿಂಸಾಚಾರ ಮತ್ತು ಅನಿಶ್ಚಿತತೆಯ ಕಾರ್ಮೋಡದಲ್ಲಿ ಸಿಲುಕಿದ್ದ ಮಣಿಪುರದ ರಾಜಕೀಯ ಆಗಸದಲ್ಲಿ ಈಗ ಹೊಸ ಬದಲಾವಣೆಯ ಗಾಳಿ ಬೀಸಲಾರಂಭಿಸಿದೆಯೆ? ಇದಕ್ಕೆ ಉತ್ತರವೆಂಬಂತೆ ಸುಮಾರು ಒಂದು ವರ್ಷದ ರಾಷ್ಟ್ರಪತಿ ಆಳ್ವಿಕೆಯ ನಂತರ, ಮಣಿಪುರದ ನೂತನ ಮುಖ್ಯಮಂತ್ರಿಯಾಗಿ ಯುಮ್ನಮ್ ಖೇಮ್ ಚಂದ್ ಸಿಂಗ್ ಅವರ ಆಯ್ಕೆ ಖಚಿತವಾಗಿದೆ. ಒಂದು ಕಾಲದಲ್ಲಿ ಮಾಜಿ ಮುಖ್ಯಮಂತ್ರಿ ಎನ್ ಬಿರೇನ್ ಸಿಂಗ್ ಅವರ ಪರಮಾಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ, ನಂತರ ಅವರ ಆಡಳಿತ ವೈಖರಿಯ ಕಟು ಟೀಕಾಕಾರನಾಗಿ ಬದಲಾಗಿ ಖೇಮ್ ಚಂದ್, ಈಗ ಮೈತೇಯಿ ಮತ್ತು ಕುಕಿ ಸಮುದಾಯಗಳ ನಡುವಿನ ಕಂದಕವನ್ನು ಮುಚ್ಚುವ ಸೇತುವೆಯಾಗಬಲ್ಲರೆ ಎಂಬ ಕುತೂಹಲ ಗರಿಗೆದರಿದೆ.

ಯುಮ್ನಮ್ ಖೇಮ್ ಚಂದ್ ಸಿಂಗ್ ಅವರು 1963ರ ಮಾರ್ಚ್ 1 ರಂದು ಇಂಫಾಲ ಪಶ್ಚಿಮ ಜಿಲ್ಲೆಯ ಯುಮ್ನಮ್ ಲೈಕೈನಲ್ಲಿ ಜನಿಸಿದರು. ಸಾಂಪ್ರದಾಯಿಕ ಮೈತೇಯಿ ಕುಟುಂಬದಲ್ಲಿ ಬೆಳೆದ ಅವರು, ತಮ್ಮ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಇಂಫಾಲದಲ್ಲಿಯೇ ಪೂರೈಸಿದರು. ನಂತರ ಕಲಾ ವಿಭಾಗದಲ್ಲಿ ಪದವಿ(ಬಿ.ಎ) ಪಡೆದರು. ಖೇಮ್ ಚಂದ್ ಚಿಕ್ಕವಯಸ್ಸಿನಿಂದಲೇ ಶಿಸ್ತು ಮತ್ತು ದೈಹಿಕ ಕಸರತ್ತಿನ ಕಡೆಗೆ ಆಸಕ್ತಿ ಬೆಳಸಿಕೊಂಡಿದ್ದರು. ರಾಜಕೀಯ ಪ್ರವೇಶಕ್ಕೂ ಮುನ್ನ ಖೇವ್ ಚಂದ್ ಅವರು ಒಬ್ಬ ಪ್ರತಿಭಾವಂತ ಕ್ರೀಡಾಪಟುವಾಗಿ ಗುರುತಿಸಿಕೊಂಡಿದ್ದರು. ಸಾಂಪ್ರದಾಯಿಕ ಟೇಕ್ವಾಂಡೋದಲ್ಲಿ 5ನೇ ಡಾನ್ ಬ್ಲ್ಯಾಕ್ ಬೆಲ್ಟ್ ಪಡೆದ ಮೊದಲ ಭಾರತೀಯ ಎಂಬ ಹೆಗ್ಗಳಿಕೆ ಇವರದು. ಈ ಕ್ರೀಡಾ ಸಾಧನೆಯೇ ಅವರಿಗೆ ಯುವಜನತೆಯ ನಡುವೆ ಅಪಾರ ಜನಪ್ರಿಯತೆ ತಂದುಕೊಟ್ಟಿತು. ಕ್ರೀಡಾ ಸಂಘಟನೆಯ ಮೂಲಕ ಅವರು ಬೆಳಸಿಕೊಂಡ ಜನಸಂಪರ್ಕ ಮತ್ತು ನಾಯಕತ್ವ ಗುಣಗಳು, ಮುಂದೆ ಅವರನ್ನು ಸಾರ್ವಜನಿಕ ಜೀವನದತ್ತ ಕರೆತರಲು ಬಲವಾದ ಅಡಿಪಾಯ ಹಾಕಿದವು.

ಖೇಮ್ ಚಂದ್ ಅವರ ರಾಜಕೀಯ ಪಯಣ ಬಿಜೆಪಿ ಮೂಲಕ ಆರಂಭವಾಯಿತು. 2012ರ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಸೋಲು ಕಂಡರೂ, ಅವರು ಧೃತಿಗೆಡದೆ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡರು. ಅವರ ಅವಿರತ ಶ್ರಮಕ್ಕೆ ಫಲ ಎಂಬಂತೆ, 2017ರಲ್ಲಿ ಸಿಂಗ್ಜಮೈ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗುವ ಮೂಲಕ ವಿಧಾನಸಭೆ ಪ್ರವೇಶಿಸಿದರು. ಚೊಚ್ಚಲ ಅವಧಿಯಲ್ಲೇ ವಿಧಾನಸಭೆಯ ಸ್ಪೀಕರ್ ಆಗಿ ಮಹತ್ವದ ಜವಾಬ್ದಾರಿ ನಿರ್ವಹಿಸಿದ ಅವರು, ರಾಜ್ಯ ರಾಜಕಾರಣದ ಪ್ರಬಲ ಶಕ್ತಿಯಾಗಿ ಬೆಳೆದರು.

ಮಣಿಪುರದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ಖೇಮ್ ಚಂದ್ ಸಿಂಗ್ ಪ್ರಬಲ ನಾಯಕರೇ. ಬಿರೇನ್ ಸಿಂಗ್ ಅವರ ಮೊದಲ ಅವಧಿಯಲ್ಲಿ ಸ್ಪೀಕರ್ ಆಗಿದ್ದ ಖೇಮ್ ಚಂದ್, ಬಿರೇನ್ ಅವರ ಅತ್ಯಂತ ನಂಬಿಕಸ್ಥ ಬಲಗೈ



ಬಂಟ ಎಂದೇ ಬಿಂಬಿತವಾಗಿದ್ದರು. ಆದರೆ, 2023ರ ಮೇ ತಿಂಗಳಲ್ಲಿ ಮೈತೇಯಿ ಮತ್ತು ಕುಕಿ ಸಮುದಾಯಗಳ ನಡುವೆ ಭುಗಿಲೆದ್ದ ಜನಾಂಗೀಯ ಸಂಘರ್ಷ ಅವರ ಸಂಬಂಧದಲ್ಲಿ ಬಿರುಕು ಮೂಡಿಸಿತು.

ಹಿಂಸಾಚಾರವನ್ನು ನಿಯಂತ್ರಿಸಲು ಬಿರೇನ್ ಸಿಂಗ್ ವಿಫಲರಾಗಿದ್ದಾರೆ ಎಂಬ ಮಾತುಗಳು ಕೇಳಿಬಂದಾಗ, ಸ್ವಪಕ್ಷೀಯರೇ ಸಿಎಂ ವಿರುದ್ಧ ಅಸಮಾಧಾನ ಹೊರಹಾಕಲಾರಂಭಿಸಿದರು. ಈ ಅಸಮಾಧಾನದ ಮುಂಚೂಣಿಯಲ್ಲಿದ್ದವರು ಇದೇ ಖೇವ್ ಚಂದ್. ''ಮುಖ್ಯಮಂತ್ರಿಯನ್ನು ಬದಲಾಯಿಸದಿದ್ದರೆ ಸರ್ಕಾರ ಪತನಗೊಳ್ಳುವುದು ಖಚಿತ'' ಎಂದು ಹೈಕಮಾಂಡ್ ಎದುರು ನೇರವಾಗಿಯೇ ಎಚ್ಚರಿಸಿದ್ದ ಖೇಮ್ ಚಂದ್, ಅಂತಿಮವಾಗಿ ಬಿರೇನ್ ಸಿಂಗ್ ರಾಜೀನಾಮೆಗೆ ಪ್ರಮುಖ ಕಾರಣಕರ್ತರಾದರು. 2025ರ ಫೆಬ್ರವರಿ 13ರಂದು ಮಣಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆ ಜಾರಿಯಾಗುವ ಮುನ್ನ ನಡೆದ ರಾಜಕೀಯ ಹಗ್ಗಜಗ್ಗಾಟದಲ್ಲಿ ಅವರು ನಿರ್ಣಾಯಕ ಪಾತ್ರ ವಹಿಸಿದ್ದರು.

ಕುಕಿಗಳ ವಿಶ್ವಾಸ ಗಳಿಸುವರೇ ಮೈತೇಯಿ ನಾಯಕ?

ಖೇಮ್ ಚಂದ್ ಸಿಂಗ್ ಒಬ್ಬ ಮೈತೇಯಿ ಜನಾಂಗದ ನಾಯಕ. ಸಾಮಾನ್ಯವಾಗಿ ಸಂಘರ್ಷ ಪೀಡಿತ ಮಣಿಪುರದಲ್ಲಿ ಒಬ್ಬ ಮೈತೇಯಿ ನಾಯಕನ ಮೇಲೆ ಕುಕಿ ಸಮುದಾಯಕ್ಕೆ ವಿಶ್ವಾಸ ಮೂಡುವುದು ಕಷ್ಟಸಾಧ್ಯ. ಆದರೆ, ಖೇಮ್ ಚಂದ್ ಈ ವಿಷಯದಲ್ಲಿ ಉಳಿದವರಿಗಿಂತ ಭಿನ್ನವಾಗಿ ನಿಲ್ಲುತ್ತಾರೆ. ಕಳೆದ ಡಿಸೆಂಬರ್ 8, 2025ರಂದು, ಇಡೀ ರಾಜ್ಯ ಜನಾಂಗೀಯ ದ್ವೇಷದಲ್ಲಿ ಬೆಂದು ಹೋಗುತ್ತಿದ್ದಾಗ, ಖೇಮ್ ಚಂದ್ ಅವರು ಉಖ್ರುಲ್ ಮತ್ತು ಕಾಮ್‌ಜಾಂಗ್ ಜಿಲ್ಲೆಗಳಲ್ಲಿರುವ ಕುಕಿ-ಝೋ ನಿರಾಶ್ರಿತರ ಶಿಬಿರಗಳಿಗೆ ಭೇಟಿ ನೀಡಿದ್ದರು. 2023ರ ಸಂಘರ್ಷದ ನಂತರ ಕುಕಿ ಪ್ರದೇಶಗಳಿಗೆ ಭೇಟಿ ನೀಡಿದ ಏಕೈಕ ಮೈತೇಯಿ ಶಾಸಕ ಇವರೇ ಎಂಬುದು ಗಮನಾರ್ಹ. ''ನಾವೆಲ್ಲರೂ ಒಂದೇ ತಾಯಿಯ ಮಕ್ಕಳು, ಹಿಂಸೆಯಿಂದ ಪರಿಹಾರ ಸಾಧ್ಯವಿಲ್ಲ'' ಎಂದು ಅವರು ನೀಡಿದ ಸಂದೇಶ, ಕುಕಿ ಸಮುದಾಯದ ಮುಖಂಡರಲ್ಲಿ ಇವರ ಬಗ್ಗೆ ಮೃದು ಧೋರಣೆ ಮೂಡಲು ಕಾರಣವಾಯಿತು. ಬಿರೇನ್ ಸಿಂಗ್ ಅವರನ್ನು ಪಕ್ಷಪಾತಿ ಎಂದು ದೂಷಿಸುತ್ತಿದ್ದ ಕುಕಿ ಸಂಘಟನೆಗಳು, ಖೇಮ್ ಚಂದ್ ಅವರ ಈ ನಡೆಗೆ ಮೆಚ್ಚುಗೆ ಸೂಚಿಸಿದ್ದವು. ಹೀಗಾಗಿ, ಇವರ ನೇಮಕವನ್ನು ಬಿಜೆಪಿ ಹೈಕಮಾಂಡ್ ಶಾಂತಿ ಸ್ಥಾಪನೆಯ ತಂತ್ರವಾಗಿಯೇ ಬಳಸಿದೆ ಎನ್ನಬಹುದು.

ಟೇಕ್ವಾಂಡೋ ಪಟುವಿನ ಶಿಸ್ತು, ಸವಾಲುಗಳು

ರಾಜಕೀಯದ ಹೊರತಾಗಿ ಖೇಮ್ ಚಂದ್ ಅವರೊಬ್ಬ ಶಿಸ್ತಿನ ಸಿಪಾಯಿ. ಅವರು ಅಂತಾರಾಷ್ಟ್ರೀಯ ಮಟ್ಟದ ಟೇಕ್ವಾಂಡೋ ಪಟು ಎಂಬುದು ವಿಶೇಷ. ಸಾಂಪ್ರದಾಯಿಕ ಟೇಕ್ವಾಂಡೋದಲ್ಲಿ 5ನೇ ಡಾನ್ ಬ್ಲ್ಯಾಕ್ ಬೆಲ್ಟ್ ಪಡೆದ ಮೊದಲ ಭಾರತೀಯ ಎಂಬ ಹೆಗ್ಗಳಿಕೆ ಇವರದು. ಕ್ರೀಡಾ ಕ್ಷೇತ್ರದಲ್ಲಿ ಅವರು ಮೈಗೂಡಿಸಿಕೊಂಡಿರುವ ಶಿಸ್ತು ಮತ್ತು ತಾಳ್ಮೆ, ಈಗ ಹೊತ್ತಿ ಉರಿಯುತ್ತಿರುವ ಮಣಿಪುರವನ್ನು ತಣಿಸಲು ನೆರವಾಗಬಲ್ಲದೇ ಎಂಬುದು ಈಗಿನ ಪ್ರಶ್ನೆ. ಆದರೆ, ಸಿಎಂ ಕುರ್ಚಿ ಖೇಮ್ ಚಂದ್ ಪಾಲಿಗೆ ಮುಳ್ಳಿನ ಹಾಸಿಗೆಯಾಗಿದೆ. ಒಂದೆಡೆ, ಪ್ರತ್ಯೇಕ ಆಡಳಿತಕ್ಕಾಗಿ ಆಗ್ರಹಿಸುತ್ತಿರುವ ಕುಕಿ ಸಂಘಟನೆಗಳ ಬೇಡಿಕೆ, ಇನ್ನೊಂದೆಡೆ ಮೈತೇಯಿ ಸಮುದಾಯದ ಅಸ್ಮಿತೆಯ ರಕ್ಷಣೆ ಈ ಎರಡರ ನಡುವೆ ಸಮತೋಲನ ಕಾಯ್ದುಕೊಳ್ಳುವುದು ಕಷ್ಟಕರ ಸವಾಲು. ರಾಷ್ಟ್ರಪತಿ ಆಳ್ವಿಕೆ ಅಂತ್ಯಗೊಂಡು, ಮತ್ತೆ ಪ್ರಜಾಪ್ರಭುತ್ವ ಸರ್ಕಾರ ಸ್ಥಾಪನೆಯಾಗುತ್ತಿದ್ದರೂ, ಬಂದೂಕುಗಳ ಸದ್ದು ಸಂಪೂರ್ಣವಾಗಿ ನಿಂತಿಲ್ಲ.

ಮುಂದೇನು? ಶಾಂತಿಯತ್ತ ಮುಖ ಮಾಡುವುದೇ ಮಣಿಪುರ?

2026ರ ಫೆಬ್ರವರಿ 3ರಂದು ನಡೆದ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಖೇಮ್ ಚಂದ್ ಅವರನ್ನು ನಾಯಕರನ್ನಾಗಿ ಆಯ್ಕೆ ಮಾಡಿರುವುದು ಕೇವಲ ಅಧಿಕಾರ ಹಸ್ತಾಂತರವಲ್ಲ; ಅದೊಂದು ದಿಟ್ಟ ಪ್ರಯೋಗ. ಮಾಜಿ ಸಿಎಂ ಬಿರೇನ್ ಸಿಂಗ್ ಅವರ ನೆರಳಿನಿಂದ ಹೊರಬಂದು, ಸ್ವತಂತ್ರವಾಗಿ ಆಡಳಿತ ನಡೆಸುವುದು ಖೇಮ್ ಚಂದ್ ಅವರಿಗೆ ಮೊದಲ ಪರೀಕ್ಷೆ. ಕುಕಿ ಸಮುದಾಯಕ್ಕೆ ಸೇರಿದ ನೇಮ್ಚಾ ಕಿಪ್ಗೆನ್ ಅವರನ್ನು ಉಪಮುಖ್ಯಮಂತ್ರಿಯನ್ನಾಗಿ ಮಾಡುವ ಸಾಧ್ಯತೆಗಳಿದ್ದು, ಇದು ಸಂಪುಟದಲ್ಲಿ ಪ್ರಾದೇಶಿಕ ಮತ್ತು ಜನಾಂಗೀಯ ಸಮತೋಲನ ಕಾಯ್ದುಕೊಳ್ಳುವ ಪ್ರಯತ್ನದಂತೆ ಕಾಣುತ್ತಿದೆ. ಈ ನಡೆ ಸಫಲವಾದರೆ, ಈಶಾನ್ಯ ಭಾರತದ ಶಾಂತಿಯ ಇತಿಹಾಸದಲ್ಲಿ ಖೇಮ್ ಚಂದ್ ಹೆಸರು ಅಚ್ಚಳಿಯದೆ ಉಳಿಯಲಿದೆ. ಇಲ್ಲವಾದರೆ, ಮತ್ತೊಮ್ಮೆ ಅಸ್ಥಿರತೆಯ ಸುಳಿಯಲ್ಲಿ ಮಣಿಪುರ ಸಿಲುಕುವ ಅಪಾಯವನ್ನೂ ತಳ್ಳಿಹಾಕುವಂತಿಲ್ಲ.

ಯುದ್ಧಭೂಮಿಯಂತಾಗಿರುವ ಮಣಿಪುರಕ್ಕೆ ಈಗ ಬೇಕಿರುವುದು ಕೇವಲ ಆಡಳಿತಗಾರನಲ್ಲ, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಬಲ್ಲ ಹಿರಿಯಣ್ಣ. ಆ ಹಿರಿಯಣ್ಣನ ಪಾತ್ರವನ್ನು ಖೇಮ್ ಚಂದ್ ಸಿಂಗ್ ಎಷ್ಟು ಸಮರ್ಥವಾಗಿ ನಿಭಾಯಿಸುತ್ತಾರೆ ಎಂಬುದರ ಮೇಲೆ ಮಣಿಪುರದ ಭವಿಷ್ಯ ನಿಂತಿದೆ.

ವ್ಯಕ್ತಿ ಪರಿಚಯ: ಯುಮ್ನಮ್ ಖೇಮ್ ಚಂದ್ ಸಿಂಗ್

ವಯಸ್ಸು : 62 ವರ್ಷ (ಜನನ: ಮಾರ್ಚ್ 1, 1963)

ಕ್ಷೇತ್ರ: ಸಿಂಗ್ಜಮೈ (ಇಂಫಾಲ ಪಶ್ಚಿಮ ಜಿಲ್ಲೆ)

ರಾಜಕೀಯ ಹಿನ್ನೆಲೆ: 2017 ಮತ್ತು 2022ರಲ್ಲಿ ಶಾಸಕರಾಗಿ ಆಯ್ಕೆ. 2017 ರಿಂದ 2022 ರವರೆಗೆ ಮಣಿಪುರ ವಿಧಾನಸಭೆಯ ಸ್ಪೀಕರ್ ಆಗಿ ಕಾರ್ಯನಿರ್ವಹಣೆ. ನಂತರ ಬಿರೇನ್ ಸಿಂಗ್ ಸಂಪುಟದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿ ಸೇವೆ.

ವಿಶೇಷತೆ: ಟೇಕ್ವಾಂಡೋದಲ್ಲಿ 5ನೇ ಡಾನ್ ಬ್ಲ್ಯಾಕ್ ಬೆಲ್ಟ್ ಪಡೆದ ಮೊದಲ ಭಾರತೀಯ. ಈಶಾನ್ಯ ಭಾರತದಲ್ಲಿ ಮಾರ್ಷಲ್ ಆರ್ಟ್ಸ್ ಜನಪ್ರಿಯಗೊಳಿಸುವಲ್ಲಿ ಪ್ರಮುಖ ಪಾತ್ರ.

2026-27ರಲ್ಲಿ ಸಾಲದ ಬಡ್ಡಿಯೇ ₹15 ಲಕ್ಷ ಕೋಟಿ! ಭಾವನಾತ್ಮಕ ಮಾತುಗಳಿಂದ ಮುಚ್ಚಿಡಲು ಸಾಧ್ಯವಿಲ್ಲದ ವಾಸ್ತವ

ಒಂದು ಹಂತದ ನಂತರ ಸಾಲವು ಅಭಿವೃದ್ಧಿಯ ಸಾಧನವಾಗದೆ, ವ್ಯವಸ್ಥೆಯ ಮೇಲೆ ಭಾರವಾಗಿ ತೂಗಿದಾಗ ಆರ್ಥಸ್ಥಿತಿ ಸದ್ದಿಲ್ಲದೆ ಕುಸಿಯತೊಡಗುತ್ತದೆ. ಅಂದ ಹಾಗೆ ಹೋಲಿಕೆ ಮಾಡಿ ಹೇಳುವುದೇ ಆದರೆ ಕೇಂದ್ರದ ಸಾಲದ ಬಡ್ಡಿಯ ಮೊತ್ತ ಮತ್ತು ದಕ್ಷಿಣದ ರಾಜ್ಯಗಳ ವಾರ್ಷಿಕ ಬಜೆಟ್ ಗಳ ಒಟ್ಟು ಗಾತ್ರ ಹೆಚ್ಚುಕಡಿಮೆ ಒಂದೇ ಆಗಿದೆ. ಕರ್ನಾಟಕ ತೆಲಂಗಾಣ ತಮಿಳುನಾಡು, ಆಂಧ್ರಪ್ರದೇಶ, ಕೇರಳ ರಾಜ್ಯಗಳ ಬಜೆಟ್ ಗಳ ಒಟ್ಟು ಗಾತ್ರ ಸುಮಾರು ₹17 ಲಕ್ಷ ಕೋಟಿ.

ಸಾಲ ಮಾಡುವುದು ಸರ್ಕಾರಗಳ ತಪ್ಪಲ್ಲ. ಸಾಲವಿಲ್ಲದೆ ಸರ್ಕಾರಗಳು ನಡೆಯುವುದಿಲ್ಲ. ಜನರ ಬದುಕು ಸುಧಾರಿಸಲು, ಉದ್ಯೋಗ ಸೃಷ್ಟಿಸಲು, ಮೂಲಭೂತ ಸೌಕರ್ಯ ನಿರ್ಮಿಸಲು ಬಳಸಿದ ಸಾಲ ಸಮಸ್ಯೆಯಲ್ಲ. ಆದರೆ ಒಂದು ಹಂತದ ನಂತರ ಆ ಸಾಲವೇ ಅಭಿವೃದ್ಧಿಯ ಸಾಧನವಾಗದೇ, ವ್ಯವಸ್ಥೆಯ ಮೇಲೆ ಭಾರವಾಗಿ ಕುಳಿತಾಗ ಆರ್ಥಿಕತೆ ಮೌನವಾಗಿ ಕುಸಿಯತೊಡಗುತ್ತದೆ.

ಇವತ್ತು ಭಾರತದ ಕೇಂದ್ರ ಸರ್ಕಾರದ ಒಟ್ಟು ಸಾಲ ಸುಮಾರು 155 ರಿಂದ 160 ಲಕ್ಷ ಕೋಟಿ ರೂಪಾಯಿ. ಇದನ್ನು ಅರ್ಥಮಾಡಿಕೊಳ್ಳಲು ಅರ್ಥಶಾಸ್ತ್ರದ ಪದವಿ ಬೇಕಿಲ್ಲ. ಅಂಕಿ ಗೊತ್ತಿಲ್ಲದವನಿಗೂ ''ಇದು ದೊಡ್ಡದೇ'' ಅನ್ನಿಸುವಷ್ಟು ಭಾರೀ ಸಂಖ್ಯೆ. ಈ ಭಾರ ಕಾಗದದ ಲೆಕ್ಕದಲ್ಲಿ ಮಾತ್ರ ಇಲ್ಲ. ಅದು ನಿಧಾನವಾಗಿ ಜನರ ಬದುಕಿನೊಳಗೂ ಇಳಿಯತೊಡಗುತ್ತದೆ.

ಇಲ್ಲಿ ಒಂದು ಸಹಜ ಪ್ರಶ್ನೆ ಹುಟ್ಟುತ್ತದೆ. ಈ ಮೊದಲು ಎಷ್ಟು ಇತ್ತು, ಈ ಸಾಲ ಯಾವ ಹಂತದಲ್ಲಿ ಇಷ್ಟಾಗಿ ಬೆಳೆಯಿತು? ಈ ಪ್ರಶ್ನೆಗೆ ಉತ್ತರ ಇಲ್ಲದಿದ್ದರೆ ಇವತ್ತಿನ ಆತಂಕದ ಗಂಭೀರತೆ ಅರ್ಥವಾಗುವುದಿಲ್ಲ. 2014ರಲ್ಲಿ ನರೇಂದ್ರ ಮೋದಿ ಸರ್ಕಾರ ಅಧಿಕಾರಕ್ಕೆ ಬಂದಾಗ ಕೇಂದ್ರ ಸರ್ಕಾರದ ಒಟ್ಟು ಬಾಕಿ ಸುಮಾರು 55 ರಿಂದ 60 ಲಕ್ಷ ಕೋಟಿ ರೂಪಾಯಿ ಇತ್ತು. ಕಳೆದ ಹತ್ತು ವರ್ಷಗಳಲ್ಲಿ ಈ ಮೊತ್ತ ಸುಮಾರು ಮೂರು ಪಟ್ಟು ಹೆಚ್ಚಾಗಿದೆ. ಇದು ರಾಜಕೀಯ ಆರೋಪವಲ್ಲ. ಸಂಖ್ಯೆಗಳೇ ಹೇಳುತ್ತಿರುವ ಸತ್ಯ.

ಇದಕ್ಕೆ ತಕ್ಷಣ ಒಂದು ಪ್ರತಿವಾದ ಕೇಳಿಸುತ್ತದೆ. ದೇಶವೂ ಬೆಳೆದಿದೆ ಅಲ್ವಾ ಎಂದು. ಹೌದು, ಆದರೆ ಅದಕ್ಕಾಗಿ ಆರ್ಥಿಕ ತಜ್ಞರು ಮತ್ತೊಂದು ಲೆಕ್ಕವನ್ನೂ ನೋಡುತ್ತಾರೆ. ಅದು ಸಾಲ ಮತ್ತು ಜಿಡಿಪಿಯ ನಡುವಿನ ಸಂಬಂಧ. 2014ರಲ್ಲಿ ಭಾರತದ ಸಾಲ ಜಿಡಿಪಿಯ ಸುಮಾರು 52 ಶೇಕಡಾ ಇತ್ತು. ಇವತ್ತು ಅದು 57 ರಿಂದ 58 ಶೇಕಡಾ



ನಡುವಿನಲ್ಲಿದೆ. ಕೋವಿಡ್ ಸಮಯದಲ್ಲಿ ಅದು ಇನ್ನೂ ಏರಿತ್ತು. ನಂತರ ಸ್ವಲ್ಪ ಇಳಿದಿದೆ. ಆದರೆ 2014ರ ಮಟ್ಟಕ್ಕೆ ಮರಳಿಲ್ಲ. ಅಂದರೆ ದೇಶ ಬೆಳೆದಂತೆ ಹೊರೆ ಕಡಿಮೆಯಾಗಿಲ್ಲ.

ಒಂದು ವಿಷಯ ಸ್ಪಷ್ಟ. ಜನರನ್ನು ನಂಬಿಸಿದಂತೆ, ವಾಟ್ಸಪ್ ಯುನಿವರ್ಸಿಟಿಯ ಪ್ರೊಫೆಸರ್‌ಗಳು ಹೇಳುವಂತೆ ಹಿಂದಿನ ಸರಕಾರದ ಸಾಲ ತೀರಿಸಿದ್ದಲ್ಲ. ಅದು ದೊಡ್ಡ ಪ್ರಮಾಣದಲ್ಲಿ ಹೆಚ್ಚಾಗಿದೆ. ಈ ವಾಸ್ತವವನ್ನು ಭಾವನಾತ್ಮಕ ವಿಚಾರಗಳಿಂದ ಮುಚ್ಚಿಡಲು ಸಾಧ್ಯವಿಲ್ಲ.

ವಿಷಯ ಇನ್ನಷ್ಟು ಗಂಭೀರವಾಗೋದು ಅದರ ಬಡ್ಡಿ ಕಟ್ಟುವಾಗ. 202425ರಲ್ಲಿ ಕೇಂದ್ರ ಸರ್ಕಾರ ಸಾಲದ ಬಡ್ಡಿ ಪಾವತಿಗೆ ಮಾತ್ರ 14.04 ಲಕ್ಷ ಕೋಟಿ ರೂಪಾಯಿ ಮೀಸಲಿಟ್ಟಿದೆ. ಈ ಮೊತ್ತ ಹೊಸ ಶಾಲೆಗೆ ಹೋಗುವುದಿಲ್ಲ. ಹೊಸ ಆಸ್ಪತ್ರೆ ನಿರ್ಮಾಣಕ್ಕೂ ಬಳಕೆಯಾಗುವುದಿಲ್ಲ. ಹೊಸ ಉದ್ಯೋಗ ಸೃಷ್ಟಿಗೂ ಉಪಯೋಗವಾಗುವುದಿಲ್ಲ. ಸಂಪೂರ್ಣವಾಗಿ ಹಿಂದಿನ ಸಾಲದ ಬಡ್ಡಿಗೆ ಮಾತ್ರ ಹರಿಯುವ ಹಣ ಇದು. ದೇಶ ಇಂದು ದುಡಿಯುವ ದೊಡ್ಡ ಮೊತ್ತದ ಸಂಪತ್ತು, ನಾಳೆಯ ಅಭಿವೃದ್ಧಿಗೆ ಅಲ್ಲ, ನಿನ್ನೆ ಮಾಡಿಕೊಂಡ ಬಾಕಿಯ ಬೆಲೆಯನ್ನು ತೀರಿಸಲು ಹೋಗುತ್ತಿದೆ!

ಮುಂದೆ ಏನು?

2026-27ರ ನಿಖರ ಅಂಕಿಅಂಶಗಳು ಇನ್ನೂ ಪ್ರಕಟವಾಗಿಲ್ಲ. ಸರ್ಕಾರವೂ ಅದನ್ನು ಈಗಲೇ ಹೇಳುವುದಿಲ್ಲ. ಆದರೆ 202425ರ ಈ ಅಂಕಿಯನ್ನು ನೋಡಿದರೆ ಮುಂದಿನ ದಿಕ್ಕು ಅರ್ಥವಾಗುತ್ತದೆ. ಬಾಕಿ ಕಡಿಮೆಯಾಗದ ಸ್ಥಿತಿಯಲ್ಲಿ ಬಡ್ಡಿ ಪಾವತಿ ಪ್ರತೀ ವರ್ಷ ಹೆಚ್ಚಾಗುವುದು ಸಹಜ. ಇದೇ ರೀತಿ ಮುಂದುವರಿದರೆ 2026-27ರಲ್ಲಿ ಸಾಲದ ಬಡ್ಡಿ ಪಾವತಿ 15 ಲಕ್ಷ ಕೋಟಿ ರೂಪಾಯಿಗೂ ಮೀರಬಹುದು ಅನ್ನುವ ಅಂದಾಜನ್ನು ಆರ್ಥಿಕ ತಜ್ಞರು ತಳ್ಳಿಹಾಕುತ್ತಿಲ್ಲ.

ಈ ಹಂತದಲ್ಲಿ ಸಾಲ ಅಭಿವೃದ್ಧಿಯ ಸಾಧನವಾಗಿರುವುದಿಲ್ಲ. ಅದು ವ್ಯವಸ್ಥೆಯ ಮೇಲೆ ಮೌನವಾಗಿ ಕುಳಿತ ಭಾರವಾಗುತ್ತದೆ. ಬಡ್ಡಿಗೆ ಹೋಗುವ ಹಣ ಹೆಚ್ಚಾದಂತೆ ಶಿಕ್ಷಣ, ಆರೋಗ್ಯ, ಪೋಷಣೆ, ಉದ್ಯೋಗ ಸೃಷ್ಟಿಯಂತಹ ಕ್ಷೇತ್ರಗಳಿಗೆ ಲಭ್ಯವಾಗುವ ಸಂಪನ್ಮೂಲಗಳು ಕುಗ್ಗುತ್ತವೆ. ಇದರ ಪರಿಣಾಮ ತಕ್ಷಣ ಬೀದಿಯಲ್ಲಿ, ನಗರಗಳಲ್ಲಿ ಕಾಣಿಸುವುದಿಲ್ಲ. ಆದರೆ ಕೆಲ ವರ್ಷಗಳ ನಂತರ ಅದು ಸಮಾಜದ ತಳಹದಿಯನ್ನು ದುರ್ಬಲಗೊಳಿಸುತ್ತದೆ.

ವಿಷಯದ ಗಂಭೀರತೆ ಇಷ್ಟಿದ್ದರೂ, ಆರ್ಥಿಕ ಪ್ರಶ್ನೆಗಳಿಗೆ ಉತ್ತರ ನೀಡುವ ಹಾಗೂ ಪರಿಹಾರ ಹುಡುಕುವ ಬದಲು, ಗಮನವನ್ನು ಬೇರೆ ದಿಕ್ಕಿಗೆ ತಿರುಗಿಸುವ ಪ್ರಯತ್ನ ನಡೆಯುತ್ತಿದೆ. ದೇಶದೊಳಗಿನ ಒಂದು ಸಮುದಾಯದ ವಿರುದ್ಧ ಸುಳ್ಳುಗಳನ್ನು ಸೃಷ್ಟಿಸುವುದು, ಶೋಷಿತ ಜಾತಿ ಸಮುದಾಯಗಳ ವಿರುದ್ಧ ಅಸಹನೆ ಬೆಳೆಸುವುದು, ಭಾವನಾತ್ಮಕ ಸಂಘರ್ಷಗಳ ಮೂಲಕ ಜನರ ಗಮನವನ್ನು ಬೇರೆಡೆ ಸೆಳೆಯುವುದು ಕಾಣುತ್ತಿದೆ. ಇಂಥ ತಂತ್ರಗಳಿಂದ ಕೆಲ ಕಾಲ ಆಡಳಿತ ನಡೆಸಬಹುದು. ಆದರೆ ದೇಶವನ್ನು ದೀರ್ಘಕಾಲ ನಿಭಾಯಿಸಲು ಸಾಧ್ಯವಿಲ್ಲ. ಏಕೆಂದರೆ ಅಂಕಿಅಂಶಗಳನ್ನು ಎಷ್ಟು ಮರೆಮಾಚಿದರೂ, ಬದುಕು ಒಂದಲ್ಲೊಂದು ದಿನ ಅವುಗಳನ್ನು ಎದುರಿಗೇ ತಂದು ನಿಲ್ಲಿಸುತ್ತದೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR